ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 | ಸಂಚಿಕೆ 36 | ಸೆಪ್ಟೆಂಬರ್ 6, 1987 | ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

“ಇಂದು ಎಲ್ಲವೂ ಬರಗಾಲ ಪೀಡಿತ ರೈತರಿಗಾಗಿ”

ಕಾರ್ಮಿಕ ವರ್ಗದ ಕಹಳೆ ಮೊಳಗಿಸಲು ಕಾ|| ಬಿ. ಟಿ. ಆರ್. ಕರೆ

ಮಳೆಯ ಲೆಕ್ಕಗಳು ಲಭ್ಯವಿರುವ ಹಿಂದಿನ ಒಂದೂಕಾಲು ಶತಮಾನದಲ್ಲಿಯೇ ಅತ್ಯಂತ ಭೀಕರವಾದಬರಗಾಲಕ್ಕೆ ನಮ್ಮ ದೇಶ ತುತ್ತಾಗಿದೆ. ಭಾರತದ 40 ನೇಯ ಸ್ವಾತಂತ್ರ್ಯೋತ್ಸವ ಈ ರಾಷ್ಟ್ರವ್ಯಾಪಿ ದುರ್ದೆಶೆಯ ಆಗಮನದಿಂದ ಭಾರತದ 40ನೇ ಸ್ವಾತಂತ್ರ್ಯೋತ್ಸವ ಆರಂಭವಾಯಿತು. ಹಿಂದಿನ ಅನೇಕ ವರ್ಷಗಳಲ್ಲಿ ಬರಗಾಲದಿಂದ ಹತ್ತಾರು ಸಾವಿರ ಜನ ಸಾಯುವುದನ್ನು ನಮ್ಮ ದೇಶ ಕಂಡಿರಲಿಲ್ಲ. ಈ ವರ್ಷ ನಮ್ಮ ಜನತೆಯ ಎಲ್ಲಾ ಶಕ್ತಿ ಸಾಮರ್ಥ್ಯ ಉಪಯೋಗವಾಗದಿದ್ದರೆ ಹಿಂದಿನ ಶತಮಾನದ ಕೊನೆಯಲ್ಲಿ ಬ್ರಿಟಿಷರ ಆಡಳಿತ ಬಂದೆರಗುತ್ತಿದ್ದ ಬರಗಾಲವನ್ನು ನೆನಪಿಸಿ ಕೊಳ್ಳಬೇಕಾದೀತು.

ನಮ್ಮ ಕೋಟ್ಯಾಂತರ ರೈತರು, ತಮ್ಮ ಶ್ರಮದಿಂದಸಾವಿರಾರು ಕೋಟಿ ರೂ. ಸಂಪತ್ತನ್ನು ಉತ್ಪಾದಿಸುತ್ತಿದ್ದವರು ಇಂದು ತಮ್ಮ ಜೀವ ಉಳಿಸಿಕೊಳ್ಳಲು ನಿಸ್ಸಹಾಯಕವಾಗಿ ಸರಕಾರ ನೀಡುವ ಭಿಕ್ಷೆಯ ಮೇಲೆ ಅವಲಂಬಿತವಾಗಬೇಕಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೆಲಸವಿಲ್ಲ, ಆಹಾರವಿಲ್ಲ ಕುಡಿಯುವ ನೀರಿಲ್ಲ. ಪ್ರತಿ ರಾಜ್ಯದಲ್ಲಿಯೂ ದನಗಳು ಸಾವಿರಾರು ಸಂಖ್ಯೆಯಲ್ಲಿ ಸಾಯುತ್ತಿವೆ.

ಈ ಬರಗಾಲ ಕಾಂಗ್ರೆಸ್ ಆಡಳಿತದಲ್ಲಿ ಅರಣ್ಯಗಳು ನಾಶವಾದದ್ದರ ನೇರ ಫಲ.ಭ್ರಷ್ಟ ಆಡಳಿತ ಕಂಟ್ರ್ಯಾಕ್ಟರ್‌ಗಳ ವ್ಯಾಪಾರಿಗಳ ಲಾಭಕ್ಕಾಗಿ ಅನುಮತಿ ನೀಡಿದ್ದರ ಫಲ. ಲಕ್ಷಾಂತರ ಜೀವಗಳಿಗೆ ಆತಂಕವಾಗಿರುವ ಈ ಬರಗಾಲ ಕಾಂಗ್ರೆಸ್ ಸರಕಾರದ ಸ್ವಾರ್ಥದ ನೇರಫಲ. ಈ ಕಾಂಗ್ರೆಸ್ ಸರಕಾರ ಬರಗಾಲ,ನೆರೆಗಳ ಸರಕಾರವೆಂದು ಹೆಸರುವಾಸಿಯಾಗಿದೆ.

ಈ ರೈತರನ್ನು ಉಳಿಸುವುದು ಹೇಗೆ ಎಂಬ ಪ್ರಶ್ನೆ ಈಗ ಕಾರ್ಮಿಕರ ಜನರ ಮುಂದಿದೆ. ಇವರನ್ನು ಬೇಜವಾಬ್ದಾರಿ ಸರಕಾರದ ದಯೆಗೆ ಬಿಟ್ಟು ಬಿಡಲಾಗದು ಅಷ್ಟೇಅಲ್ಲ ಕಾಂಗ್ರೆಸ್ ಆಡಳಿತದ ಮೇಲೆ ಶಾಪಗಳ ಸುರಿಮಳೆ ಸುರಿಸುವುದರಿಂದ ರೈತರು ಬದುಕಿ ಜೀವವುಳಿಸಲು ಸಾಧ್ಯವಿಲ್ಲ.

ಕಾರ್ಮಿಕ ವರ್ಗದ ಪಾತ್ರ

ಕಾರ್ಮಿಕವರ್ಗ, ಅದರ ಸಂಘಟಿತ ಬಲ ಕ್ರಿಯಾಶೀಲವಾಗಬೇಕು. ರೈತರನ್ನುಳಿಸಬೇಕು. ಈ ಕೆಲಸವನ್ನು ಕೇವಲ ಆಡಳಿತಶಾಹಿಗೇ ಬಿಡಬಾರದೆಂದು ಕಾರ್ಮಿಕವರ್ಗ ಒತ್ತಾಯಿಸಬೇಕು ಈ ಭ್ರಷ್ಟ, ಅದಕ್ಷ ಆಡಳಿತಶಾಹಿಯ ಕೈಯಲ್ಲಿ ಹಸಿವಿನಿಂದ ಬೆಂದ ಜನತೆಗೆ ಅಪಮಾನ, ಭಯಗಳ ಕಾಣಿಕೆಯಷ್ಟೇ ಸಿಗುವುದು.

ಬರಗಾಲ ಪರಿಹಾರ ಇಡೀ ರಾಷ್ಟ್ರದ ಕಾಳಜಿಯಾಗಬೇಕು. ಎಲ್ಲಾ ರಾಜಕೀಯ ಪಕ್ಷಗಳು ಕಾರ್ಮಿಕ ಸಂಘಗಳಿಂದ ಸಾಮೂಹಿಕ ಸಂಘಟನೆಗಳನ್ನು ಒಳಗೊಳ್ಳಬೇಕು ಎಂದು ಕಾರ್ಮಿಕ ವರ್ಗ ಒತ್ತಾಯಿಸ ಬೇಕು.

ಅಷ್ಟೇಅಲ್ಲ ಕಾರ್ಮಿಕವರ್ಗ ಬರಗಾಲ ಪೀಡಿತ ರೈತನಿಗೆ ತನ್ನಿಂದ ಸಾಧ್ಯವಾದ ಎಲ್ಲವನ್ನು ಮಾಡಲು ಸಿದ್ಧವಿರಬೇಕು. ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಧನಸಹಾಯ ನೀಡವುದಲ್ಲದೆಗ್ರಾಮೀಣ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ರಮದ ಉಸ್ತುವಾರಿ ಮಾಡಲು ಕಾರ್ಮಿಕರ ಪ್ರತಿನಿಧಿಗಳನ್ನು ಕಳುಹಿಸಬೇಕು. ಆಹಾರ ಹಾಗೂ ನೀರನ್ನು ಹುಡುಕುತ್ತಾ ನಗರಗಳ ಬಾಗಿಲು ತಟ್ಟುವ ಸಾಮೂಹಿಕ ವಲಸೆಗಾರರನ್ನು ನೋಡಿಕೊಳ್ಳಲು ಕಾರ್ಮಿಕರದೇ ಆದ ಸಮಿತಿಗಳನ್ನು ರಚಿಸಬೇಕು. ಕೇಂದ್ರ ಸರಕಾರ ಕೂಡಲೇ ಎಲ್ಲಾ ರಾಜ್ಯಗಳಿಗೆ ಹಣವನ್ನೊದಗಿಸಬೇಕೆಂದು ಒತ್ತಾಯಿಸಬೇಕು.

ಸರಕಾರ ಇತರೇ ವಿಷಯಗಳಲ್ಲಿ ಹಣವನ್ನುಳಿಸಿ ರೈತರನ್ನುಳಿಸಲು ಎಲ್ಲಾ ಸಹಾಯ ನೀಡಬೇಕೆಂದು ಒತ್ತಾಯಿಸಬೇಕು. ಕೇಂದ್ರದ ಬಳಿ ಬೇಕಾದಷ್ಟು ಸಂಪನ್ಮೂಲಗಳಿವೆ. ಅದು ಆಹಾರ ಅಡಿಗೆ ತೈಲವನ್ನು ವಿದೇಶಿ ವಿನಿಮಯವನ್ನು ವೆಚ್ಚ ಮಾಡಿ ಆಮದು ಮಾಡಲು ಹಿಂತೆಗೆಯ ಬಾರದು. “ಎಲ್ಲವೂ ರೈತರಿಗಾಗಿ” ಎಂಬುದು ಕಾರ್ಮಿಕ ವರ್ಗದ ಕಹಳೆಯಾಗಬೇಕು. ಆದರೆ ಬಲವಾದ ಸಾರ್ವಜನಿಕ ಒತ್ತಡವಿಲ್ಲದೆ ಇದು ಸಾಧ್ಯವಿಲ್ಲ. ಈ ಒತ್ತಡವನ್ನು ಸಂಘಟಿಸಲು ಕಾರ್ಮಿಕ ವರ್ಗ ಮುಂದಾಗಬೇಕು.

ಈ ದುರಂತವನ್ನು ಸಮಾಜದ,ಸರಕಾರದ ಹಿಡಿತದ ಹೊರಗಿರುವ ಪ್ರಾಕೃತಿಕ ವಿಕೋಪವೆಂದು ಕರೆಯುವುದು ಒಂದು ದೊಡ್ಡ ಸುಳ್ಳು: ಎಲ್ಲಾ ಕಾರ್ಮಿಕ ಸಂಘಗಳು, ಜನರ ಎಲ್ಲಾ ವಿಭಾಗಗಳು ತಮ್ಮ ಕೈಯಲ್ಲಿ ಸಾಧ್ಯವಿದ್ದುದನ್ನೆಲಾ ಮಾಡಬೇಕು. ತಮ್ಮ ಗಳಿಕೆಯಿಂದ ಉದಾರವಾಗಿ ಧನ ಸಹಾಯ ಮಾಡಿ ರೈತರ ಕಷ್ಟದಲ್ಲಿ ತಮ್ಮ ಸೌಹಾರ್ದ ನೆರವನ್ನು ನೀಡಬೇಕು. ●

ಶತಮಾನದಲ್ಲೇ ಭೀಕರವಾದ ಬರದ ಕುರಿತು

ಕೇಂದ್ರ ಸಮಿತಿಯ ನಿರ್ಣಯ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ದೇಶದ ದೊಡ್ಡ ಭಾಗಗಳಲ್ಲಿರುವ ಬರಪರಿಸ್ಥಿತಿಯ ಬಗ್ಗೆ ಕಳವಳ ಮತ್ತು ಆತಂಕ ವ್ಯಕ್ತಪಡಿಸುತ್ತದೆ. ಈ ಶತಮಾನದಲ್ಲೇ ಈ ವರ್ಷದ ಬರ ಪರಿಸ್ಥಿತಿ ಅತ್ಯಂತ ತೀವ್ರ ಮತ್ತು ವ್ಯಾಪಕವಾದದ್ದು.ಮುಂಗಾರು ಮಳೆಯ ತೀವ್ರ ಅಭಾವದಿಂದಾಗಿ 35 ಹವಾಮಾನ ಸಬ್‌ಡಿವಿಜನ್‌ಗಳಲ್ಲಿ 25 ಸಬ್‌ಡಿವಿಜನ್‌ಗಳಲ್ಲಿ ಬರ ಬಿದ್ದಿದೆ. ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ಪಂಜಾಬ್, ಹರಿಯಾಣ, ಉತ್ತರಪ್ರದೇಶ, ಒರಿಸ್ಸಾ, ಆಂಧ್ರ, ಕೇರಳ, ಕರ್ನಾಟಕ ಮತ್ತು ಮಹಾರಾಷ್ಟ್ರದ ದೊಡ್ಡ ಭಾಗಗಳಲ್ಲಿ ತೀವ್ರ ಬರ ಪರಿಸ್ಥಿತಿಯಿದೆ.

ಬರದಿಂದ ಖಾರಿಫ್ ಬೆಳೆ ಹಾಳಾಗಿದೆ, ಕುಡಿಯುವ ನೀರಿನ ತೀವ್ರ ಕೊರತೆ ಉಂಟಾಗಿದೆ. ದನಕರುಗಳಿಗೆ ಮೇವಿನ ಅಭಾವ ಸಹ ತೀವ್ರತರವಾಗಿದೆ. ಹಳ್ಳಿಗಳಲ್ಲಿ ಉದ್ಯೋಗದ ಲಭ್ಯತೆ ಸಹ ಹದಗೆಟ್ಟಿದೆ. ದೊಡ್ಡ ಪ್ರಮಾಣದಲ್ಲಿ ಆಹಾರದ ಅಭಾವದಿಂದ ಜನ ಉಪವಾಸ ಬೀಳಬೇಕಾದೀತು. ತತ್‌ಕ್ಷಣ ಸೂಕ್ತ ತುರ್ತಿನ ಕ್ರಮಕೈಗೊಳ್ಳದಿದ್ದರೆ. ಹಳ್ಳಿಯ ಬಡವರ ಬೇಗೆ ಸಹಿಸಲಸಾಧ್ಯವಾದೀತು.

ಕೇಂದ್ರ ಸರಕಾರಕ್ಕೆ ಪರಿಸ್ಥಿತಿಯ ತೀವ್ರತೆ ತಟ್ಟಿದಂತಿಲ್ಲ.ಅಗಾಧ ಪ್ರಮಾಣದ ಕ್ರಮಗಳ ಅಗತ್ಯದ ಬಗ್ಗೆ ಸಹ ಅರಿವಿದ್ದಂತಿಲ್ಲ. ಭ್ರಷ್ಟ ಅದಕ್ಷ ಆಡಳಿತ ಯಂತ್ರದ ಮೇಲೆ ಅದು ಇನ್ನೂ ಅವಲಂಬಿಸಿ ಕೊಂಡಿದೆ. ಸ್ವಾತಂತ್ರ್ಯಬಂದು 40 ವರ್ಷಗಳ ನಂತರ ಕೃಷಿಯೋಗ್ಯ ಜಮೀನಿನ ಶೇಕಡಾ 27ರಷ್ಟು ಮಾತ್ರ ನೀರಾವರಿಗೆ ಒಳಪಟ್ಟಿದೆ. ಉಳಿದಂತೆ ಕೃಷಿ ಪೂರ್ಣವಾಗಿ ಮಳೆಯನ್ನೇ ನೆಚ್ಚಿಕೊಂಡಿದೆ. ನೀರಾವರಿಯ ಸಾಧ್ಯತೆ ಮತ್ತು ಉಪಯೋಗದ ನಡುವೆ ಭಾರೀ ಕಂದರವಿದೆ. ಈ ತೀವ್ರ ಪರಿಸ್ಥಿತಿ ಸರ್ಕಾರ ತನ್ನ ನೀತಿಗಳನ್ನು ಬದಲಾಯಿಸಲು ಶಕ್ಯ ಒತ್ತಡ ಹೇರಬೇಕು. ಎಲ್ಲಾ ದೊರಕುವ ಜಲ ಸಂಪನ್ಮೂಲಗಳನ್ನು ಕೃಷಿಗೆ ವೈಜ್ಞಾನಿಕವಾಗಿ ಬಳಸುವ ನೀತಿಗೆ ಸರ್ಕಾರ ಪ್ರಾಧಾನ್ಯತೆ ನೀಡಬೇಕು.

ರಾಜ್ಯ ಸರ್ಕಾರಗಳ ಸಹಕಾರದಿಂದ ಕೇಂದ್ರ, ಸರ್ಕಾರ ಕೆಳಕಂಡ ಕ್ರಮಗಳನ್ನು ತುರ್ತಿನಿಂದ ಕೈಗೊಳ್ಳಬೇಕು.

1.ರಾಜ್ಯ ಸರ್ಕಾರಗಳು ಕೇಳುವಷ್ಟು ಕೇಂದ್ರ ಸಹಾಯವನ್ನು ಬಿಡುಗಡೆ ಮಾಡಬೇಕು.

2. ಬರ ಸಂತ್ರಸ್ತ ಪ್ರದೇಶಗಳಲ್ಲಿ ಸರ್ಕಾರಿ ಗೋದಾಮುಗಳಲ್ಲಿ ಕೊಳೆಯುವ ಆಹಾರ ಧಾನ್ಯಗಳನ್ನು ತತ್‌ಕ್ಷಣವೇ ಬಿಡುಗಡೆ ಮಾಡಬೇಕು.

3.ಪೀಡಿತ ಹಳ್ಳಿಗಳಿಗೆ ಕುಡಿಯುವ ನೀರಿನ ಪೂರೈಕೆ.

4.ಕೃಷಿ ಚಟುವಟಿಕೆಗಳಿಗೆ ಅವಿರತ ವಿದ್ಯುತ್ ಶಕ್ತಿಯ ಪೂರೈಕೆ.

5.ಪೀಡಿತ ಪ್ರದೇಶಗಳಲ್ಲಿ ಕೃಷಿ ಕೂಲಿಗಾರರು ಮತ್ತು ಬಡ ರೈತರಿಗೆ 'ಕೂಲಿಗೆ ಕಾಳು' ಕಾರ್ಯಕ್ರಮವನ್ನು ಪುನರಾರಂಭಿಸಬೇಕು.

[8ನೇ ಪುಟ ನೋಡಿ]

ರಾಜ್ಯ ಸಮಿತಿ ತೀರ್ಮಾನಗಳು

ಆಗಸ್ಟ್ 30 ಮತ್ತು 31ರಂದು ಬೆಂಗಳೂರಿನಲ್ಲಿ ಜರುಗಿದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಸಭೆಯು ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿದೆ.

1. ರೈತರ ಚಳುವಳಿಗೆ ಬೆಂಬಲ

ಅಖಿಲ ಭಾರತ ಕಿಸಾನ್ ಸಭಾದ ಕರೆಯ ಮೇರೆಗೆ ರೈತರ12 ಪ್ರಮುಖ ಬೇಕೆಗಳಿಗಾಗಿ ಒತ್ತಾಯಿಸಿ ಸೆಪ್ಟೆಂಬರ್ 7 ರಿಂದ 13ರ ವರೆಗೆ ನಡೆಯಲಿರುವ ಚಳುವಳಿಯನ್ನು ಯಶಸ್ವಿಗೊಳಿಸಲು ಸಕ್ರೀಯ ಬೆಂಬಲನೀಡುವಂತೆ ರಾಜ್ಯದ ಕಾರ್ಮಿಕ ವರ್ಗ ಮತ್ತು ಜನತೆಗೆ ಕರೆ ನೀಡಲಾಗಿದೆ.

2.ನ್ಯಾಯವಾದಿ ರಷೀದ್ ಕೊಲೆ

ಕೇರಳದ ನ್ಯಾಯವಾದಿ ಶ್ರೀರಷೀದ್ ರವರ ನಿಗೂಢ ಕೊಲೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು ಈ ಸಂಬಂಧದಲ್ಲಿ ಪೋಲೀಸರ ಅನುಚಿತ ವರ್ತನೆಯನ್ನು ಖಂಡಿಸಿದೆ. ಪ್ರಕರಣದ ಕುರಿತು ಸಿ.ಬಿ.ಐ. ತನಿಖೆಗೆ ಒತ್ತಾಯಿಸಿ ವಕೀಲರು ಹೂಡಿರುವ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಲಾಗಿದೆ. ವಕೀಲರ ನಾಯಕರು ಮತ್ತು ಮುಖ್ಯ ಸಾಕ್ಷಿಗಳಿಗೆ ಅಗತ್ಯ ರಕ್ಷಣೆ ಒದಗಿಸಿ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಕೂಡಲೇ ಸಸ್ಪೆಂಡ್‌ಮಾಡಿ ನಿಷ್ಪಕ್ಷಪಾತತನಿಖೆಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಲಾಗಿದೆ.

3.ರಿಸರ್ವ್ ಬ್ಯಾಂಕ್ ನೌಕರರ ಮುಷ್ಕರ

ರಿಸರ್ವ್ ಬ್ಯಾಂಕ್ ಆಡಳಿತ ವರ್ಗದ ದಬ್ಬಾಳಿಕೆಯ ವಿರುದ್ಧ ನೌಕರರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ಸೂಚಿಸಲಾಗಿದೆ.

ಅಧ್ಯಾಪಕರ ರಾಷ್ಟ್ರವ್ಯಾಪಿ ಮುಷ್ಕರ

ವೇತನ ಪರಿಷ್ಕರಣ ಮತ್ತಿತರೆ ನ್ಯಾಯಯುತ ಬೇಡಿಕೆಗಳಿಗಾಗಿ ಕಳೆದ ಒಂದು ತಿಂಗಳಿನಿಂದ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರು ನಡೆಸುತ್ತಿರುವ ಅನಿರ್ದಿಷ್ಟ ಚಳುವಳಿಗೆ ಬೆಂಬಲ ನೀಡಲಾಗಿದ್ದು ಮುಷ್ಕರವನ್ನು ಕೂಡಲೇ ಇತ್ಯರ್ಥ ಗೊಳಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ. ●

ಕೊನೆಗಾಣದ ವಿಪುಲ ವಿದ್ಯುತ್‌ಶಕ್ತಿಯ ಹೊಸ್ತಿಲಲ್ಲಿ ಜಗತ್ತು

ನ್ಯೂಯಾರ್ಕಿನಲ್ಲೊಂದು ಸಭಾಭವನ. 1000 ಜನ ಹಿಡಿಸುವ ಈ ಸಭಾಭವನದಲ್ಲಿ, ಕೂರಲು ಜಾಗ ಸಾಲದೆ 2000 ಜನ ಕಿಕ್ಕಿರಿದು ನಿಂತಿದ್ದರು. ಇದೇನು ಜನಪ್ರಿಯ ಪಾಪ್ ಗಾಯಕರ ಕಛೇರಿಯೆ? ಸರ್ಕಸ್ಸೆ? ಎರಡೂ ಅಲ್ಲ. ಸಾಮಾನ್ಯವಾಗಿ ಆಕಳಿಸುತ್ತಿರುವ ವಿಜ್ಞಾನಿಗಳು ಕಾಟಾಚಾರಕ್ಕೆ ಭಾಗವಹಿಸುವ, ಅಮೇರಿಕನ್ ಭೌತಶಾಸ್ತ್ರ ಸೊಸೈಟಿಯ ಸಭೆ. ಆದರೆ ಈ ಸಭೆಗೆ ವಿಶೇಷ ಮಹತ್ವವಿತ್ತು. ಹೊಸ ಅತಿವಾಹಕ ವಸ್ತುಗಳ ಬಗ್ಗೆ ವಿಶೇಷ ಸಭೆ ಇದಾಗಿತ್ತು. ಇತ್ತೀಚಿನ ದಿನಗಳಲ್ಲಿ ಜಗತ್ತಿನ ಹಲವು ದೇಶಗಳ ಹಲವು ವಿಜ್ಞಾನ ಕೇಂದ್ರಗಳಲ್ಲಿ ಘೋಷಿಸಲ್ಪಡುತ್ತಿರುವ, ಹೆಚ್ಚಿನ ಉಷ್ಣತೆಯಲ್ಲಿ ಅತಿವಾಹಕತೆ ತೋರಿಸುವ ಹೊಸ ವಸ್ತುಗಳ ಶೋಧನೆಯ ಸರಮಾಲೆ ಈ ಸಭೆಗೆ ಹಿನ್ನೆಲೆ.

ಅತಿವಾಹಕತೆ ಹೊಸ ಆವಿಷ್ಕಾರವೇನಲ್ಲ. ಇದು 1911ರಷ್ಟು ಹಿಂದೆ ಕಂಡುಹಿಡಿಯಲ್ಪಟ್ಟ ಕೆಲವು ವಸ್ತುಗಳ ಸ್ವಭಾವ ಹೀಲಿಯಂಎಂಬ ಅನಿಲವನ್ನು ತಣ್ಣಗಾಗಿಸಿ ದ್ರವೀಕರಿಸುವ ವಿಧಾನ ಕಂಡು ಹಿಡಿದ ವಿಜ್ಞಾನಿ, ಇದನ್ನು ಆಕಸ್ಮಿಕವಾಗಿ ಕಂಡುಹಿಡಿದ. ಅವನು ದ್ರವ ಹೀಲಿಯಂನ ತಣ್ಣಗಿನ ವಾತಾವರಣದಲ್ಲಿ ಪಾದರಸದ ರೋಧಕ ಶಕ್ತಿ (RESISTANCE) ಅಳೆಯುತ್ತಿದ್ದಾಗ ಸುಮಾರು –269°C ಉಷ್ಣತೆಯಲ್ಲಿ (ಅಂದರೆ ಬರ್ಫದ ಉಷ್ಣತೆಗಿಂತ 269°Cನಷ್ಟು ಕಡಿಮೆಉಷ್ಣತೆಯಲ್ಲಿ) ರೋಧಕಶಕ್ತಿ ಒಮ್ಮೆಗೆ ಕಡಿಮೆಯಾಗಿ ಸೊನ್ನೆಯಾಗಿದ್ದು ಕಂಡುಬಂತು. ಈ ಸ್ವಭಾವಕ್ಕೆ ಅತಿವಾಹಕತೆ(SUPER CONDUETIVITY) ಎಂದು ಹೆಸರಿಡಲಾಯಿತು.

ಆ ಮೇಲೆ ವಿಜ್ಞಾನಿಗಳ ಪ್ರಯೋಗಗಳಿಂದ ಅತಿವಾಹಕತೆ ಹಲವು ವಸ್ತುಗಳಲ್ಲಿ (ಮೂಲಭೂತ ವಸ್ತುಗಳು, ಮಿಶ್ರವಸ್ತುಗಳು, ಮಿಶ್ರಲೋಹಗಳು ಒಂದು ವಿಶಿಷ್ಟ ಉಷ್ಣತೆಗಿಂತ ಕಡಿಮೆ ಉಷ್ಣತೆಯಲ್ಲಿಇರುವುದುಕಂಡುಬಂತು. ಆದರೆ ಈ ಉಷ್ಣತೆ-250 Cಗಿಂತ ಯಾವಾಗಲೂ ಕಡಿಮೆಯಾಗಿತ್ತು. ಈ ಉಷ್ಣತೆ ದ್ರವೀಕರಿಸಿದ ಹೀಲಿಯಂ(ಇದು ಬಹಳ ಕಷ್ಟದಾಯಕ ಮತ್ತು ದುಬಾರಿ ವಿಧಾನ) ನಿಂದ ಮಾತ್ರ ಪಡೆಯಲು ಸಾಧ್ಯವಿತ್ತು. ಆದ್ದರಿಂದ ಅತಿವಾಹಕತೆ ಬರಿಯಒಂದು ವೈಜ್ಞಾನಿಕ ಕುತೂಹಲವಾಗಿ ಉಳಿಯಿತು. ಆದರೆ ಅತಿವಾಹಕತೆಯ ಉಪಯೋಗಗಳ ಬಗ್ಗೆ ಹಲವಾರು ಪ್ರಯೋಗಗಳು ನಡೆದವು.

ಹೆಚ್ಚಿನ ಉಷ್ಣತೆಯಲ್ಲಿ ಅತಿವಾಹಕತೆ

ಹೆಚ್ಚಿನ ಉಷ್ಣತೆಯಲ್ಲಿ ಅತಿವಾಹಕತೆಯನ್ನು ಅಲ್ಲಗಳೆಯುವ ಯಾವುದೇ ಸೈದ್ಧಾಂತಿಕ ಆಧಾರಗಳು ಇರಲಿಲ್ಲ. ಆದರೂ ಯಾವ ರೀತಿಯ ವಸ್ತುಗಳಲ್ಲಿ ಇದನ್ನು ಹುಡುಕ ಬೇಕು ಎನ್ನುವ ಬಗ್ಗೆ ಸೈದ್ಧಾಂತಿಕ ಮಾರ್ಗದರ್ಶನ ವಿಜ್ಞಾನಿಗಳಿಗೆ ಸಿಗಲಿಲ್ಲ. ಆದರೂ ಈ ಬಗ್ಗೆ ಶೋಧನೆ ಮುಂದುವರಿಯಿತು.

75 ವರ್ಷಗಳ ಶೋಧನೆಯ ನಂತರ 1986ರ ಜನವರಿಯಲ್ಲಿಸ್ವಿಟ್‌ಜರ್‌ಲ್ಯಾಂಡಿನ ಐ.ಬಿ.ಎಂ. ಶೋಧನ ಕೇಂದ್ರದ ವಿಜ್ಞಾನಿಗಳು 238°Cಯಲ್ಲಿ ಅತಿವಾಹಕತೆ ತೋರಿಸುವ ಮಿಶ್ರವಸ್ತು ಕಂಡುಹಿಡಿದರು. (238°C ಉಷ್ಣತೆ 250°C ಗಿಂತ ಹೆಚ್ಚು ಎಂದು ಗಮನಿಸಬೇಕು) ಇದು ಪ್ರಕಟಿತವಾದ ನಂತರ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ವಿಜ್ಞಾನಿಗಳು ಹೊಸ ಉತ್ಸಾಹದಿಂದ ಕಾರ್ಯ ಮುಂದುವರಿಸಿದರು. 1986ರ ಜನವರಿಯಿಂದ ಡಿಸೆಂಬರ್ ವರಗೆ ಹೊಸ ಹೊಸ ವಸ್ತುಗಳ ಅತಿವಾಹಕತೆಯ ಉಷ್ಣತೆ ಏರುತ್ತಾ ಹೋಯಿತು. ವಿವಿಧ ವಿಜ್ಞಾನಿ ಗುಂಪುಗಳಿಂದ ಪೈಪೋಟಿಯೆಂದೆಂಬಂತೆ ವಾರ 2 ವಾರಕ್ಕೊಂದು ಪ್ರಕಟಣೆಗಳು ಬರಹತ್ತಿದವು. ಅತಿವಾಹಕತೆಯ ಉಷ್ಣತೆಯ ಏರಿಕೆ, ಒಲಿಂಪಿಕ್ಸ್ ಪಂದ್ಯಗಳಲ್ಲಿ ಒಂದಾದ ಮೇಲೆ ಒಂದು ವಿಕ್ರಮ ಮುರಿದು ಮುನ್ನುಗ್ಗುವ ಕ್ರೀಡಾಪಟುಗಳ ಪ್ರದರ್ಶನವನ್ನು ನೆನಪಿಗೆ ತರುವಂತಹುದು. ಯಾವುದೇ ವಿಜ್ಞಾನದ ವಿಷಯದ ಬಗ್ಗೆ ಈ ರೀತಿಯ ಆಸಕ್ತಿ ಕುತೂಹಲಗಳು ಇಷ್ಟುಹೆಚ್ಚಿನ ಅವಧಿ ಇದ್ದದ್ದಿಲ್ಲ. (ವಿಜ್ಞಾನಿಗಳನ್ನು ಸೇರಿಸಿ) 1986ರ ಡಿಸೆಂಬರ್ ಹೊತ್ತಿಗೆ ಅತಿವಾಹಕತೆಯ ಗರಿಷ್ಟ ಉಷ್ಣತೆ–183°C ಗೆ ಏರಿತು. ಈ ಉಷ್ಣತೆಗೆ ವಿಶೇಷ ಪ್ರಾಮುಖ್ಯತೆ ಇದೆ. ಯಾಕೆಂದರೆ ಇದು ದ್ರವೀಕರಿಸಿದ ಸಾರಜನಕದ ಉಷ್ಣತೆಗಿಂತ (–196°Cಗಿಂತ) ಸುಮಾರು 13 ಹೆಚ್ಚು ಸಾರಜನಕವನ್ನು ದ್ರವೀಕರಿಸುವುದು ಅತ್ಯಂತ ಅಗ್ಗದ ಸುಲಭ ವಿಧಾನ. ಯಾವುದೇ ವಿಶ್ವವಿದ್ಯಾಲಯದ (ಭಾರತದಲ್ಲೂ) ಭೌತಶಾಸ್ತ್ರ ವಿಭಾಗ ಇದು ಸುಲಭವಾಗಿ ಸಿಗುತ್ತದೆ. ಅಂದರೆ ಅತಿವಾಹಕತೆಯ ದಿನನಿತ್ಯದ ಬಳಕೆಗೆ ದಾರಿ ತೆರೆದಂತಾಗಿದೆ.

ಭಾರತ ಹಿಂದೆ ಬೀಳಲಿಲ್ಲ.

ಅತಿವಾಹಕತೆಯ ಈ ನಾಗಾಲೋಟ ಭಾರತ ಹಿಂದೆ ಬೀಳಲಿಲ್ಲ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಮುಂಬಯಿಯ ಭಾಭಾ ಕೇಂದ್ರಕ್ಕೆ ಸೇರಿದ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳ ಗುಂಪು ಪ್ರತ್ಯೇಕವಾಗಿ 183°Cನಲ್ಲಿ ಅತಿವಾಹಕತೆ ತೋರಿಸುವ ವಸ್ತುಗಳನ್ನು ಕಂಡುಹಿಡಿದಿದ್ದಾರೆ. ಜಗತ್ತಿನ ಮೊದಲ ಪ್ರಕಟಣೆಯ ಸುಮಾರು 2 ವಾರದೊಳಗೆ ಭಾರತೀಯ ವಿಜ್ಞಾನಿಗಳ ಯಶಸ್ಸು ಹೆಮ್ಮೆ ತರುವಂತಹುದು. ಹಿಂದೆಂದೂ ಯಾವುದೇ ಕ್ರಾಂತಿಕಾರಿ ವೈಜ್ಞಾನಿಕ ಆವಿಷ್ಕಾರ, ಭಾರತದ ವಿಜ್ಞಾನಿಗಳು ಹೆಚ್ಚು ಕಡಿಮೆ ಜಗತ್ತಿನ ಪ್ರಥಮ ಆವಿಷ್ಕಾರದ ಜತೆಗೆ ಮಾಡಿದ್ದಿಲ್ಲ. ಆದಲ್ಲೂ ಇಂತಹ ಪ್ರಾಮುಖ್ಯತೆ ಹೊಂದಿಸಿರುವ ಆವಿಷ್ಕಾರದ ವಿಷಯದಲ್ಲಿ ಇದು ನಡೆದದ್ದು ಗಮನಾರ್ಹ. ಈ ಆರಂಭಿಕ ಮುನ್ನಡೆಯ ಪೂರ್ಣ ಪ್ರಯೋಜನ ಪಡೆಯ ಬೇಕಾಗಿದೆ.

ಅತಿವಾಹಕತೆಯ ಪೈಪೋಟಿ ಇಲ್ಲಿಗೆ ನಿಂತಿಲ್ಲ. ರಭಸದಿಂದ ಮುಂದುವರಿದಿದೆ. ಆದರೆ ಆ ಮೇಲಿನ ಪ್ರಕಟಣೆಗಳು ವಿವರಗಳನ್ನು ಕೊಡುವುದನ್ನು ನಿಲ್ಲಿಸಿವೆ. ಈ ವಿವರಗಳಿಲ್ಲದೆ ಇಂತಹ ಪ್ರಕಟಣೆಗಳು ಎಷ್ಟು ಸತ್ಯ ಎಂದು ಹೇಳುವುದು ಕಷ್ಟ. ಕೆಲವು ವಿಜ್ಞಾನಿಗಳ ಗುಂಪುಗಳು 40°C ಉಷ್ಣತೆಯಲ್ಲಿ ಅತಿವಾಹಕತೆ ತೋರಿಸುವ ವಸ್ತುಗಳನ್ನು ಕಂಡು ಹಿಡಿದಿರುವುದಾಗಿ ಪ್ರಕಟಿಸಿದ್ದಾರೆ. ಇಂತಹ ವಸ್ತುಗಳ ವಿವರಗಳ ವಾಣಿಜ್ಯ ಮಹತ್ವದಿಂದಾಗಿ ವಿಜ್ಞಾನಿಗಳು ಈ ವಿವರಗಳನ್ನು ಗೋಪ್ಯವಾಗಿಡುತ್ತಿದ್ದಾರೆ ಎಂಬ ಹಿನ್ನಲೆಯಲ್ಲಿ ಈ ಪ್ರಕಟಣೆಗಳು ನಿಜ ಎನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ

ಇತ್ತೀಚೆಗೆ ಕರ್ನಾಟಕದಲ್ಲಿನ ವಿದ್ಯುತ್ ಕಡಿತವನ್ನು ಮತ್ತೆ ಶೇ 10 ರಷ್ಟು ಏರಿಸಿದ್ದಾರೆ. ಕೈಗಾರಿಕೆಗಳು ಮತ್ತಷ್ಟು ಕತ್ತಲಲ್ಲಿ ಮುಳುಗಿ ಹೋಗಲಿವ. ಎನ್ನುವ ಸಮಯದಲ್ಲಿಯೇ ಗಾಳಿಯಲ್ಲಿ ಹಾರುವ ರೈಲು, ವಿದ್ಯುತ್ ಎಂಬ ಅಪೂರ್ವನಿಧಿಯ ಎಂದೂ ಕೊನೆಗಾಣದ ನಿಕ್ಷೇಪಕ್ಕೆ ಕೈಮರವಾಗಿ "ಅತಿವಾಹಕತೆ"ಯ ಸಂಶೋಧನೆಯಾಗಿದೆ.

ಅತಿವಾಹಕತೆಯ ಉಪಯೋಗಗಳು

ಈಗಿನ ಸಂಶೋಧನೆಯ ರಭಸ ನೋಡಿದರೆ ಕೆಲವು ವರ್ಷಗಳಲ್ಲೇ ಸಾಮಾನ್ಯ ಉಷ್ಣತೆಯಲ್ಲಿ(ಅಂದರೆ+ 25 ರಿಂದ + 40 c) ಅತಿವಾಹಕತೆ ತೋರಿಸುವ ವಸ್ತುಗಳ ಉತ್ಪಾದನೆ ಹೆಚ್ಚು ಕಡಿಮೆ ಖಚಿತವಾಗಿದೆ. ಆದ್ದರಿಂದ ಇದಕ್ಕೆ ಸಮಾನಾಂತರವಾಗಿ ಈ ಅತಿವಾಹಕತೆಯ ವಿಜ್ಞಾನವನ್ನು ಯಾವ ರೀತಿ ಬಳಸಬಹುದು ಎಂಬ ಬಗ್ಗೆ ತಂತ್ರಜ್ಞಾನಿಗಳು ಸಂಶೋಧನೆ ತೀವ್ರಗೊಳಿಸಿದ್ದಾರೆ.

ಅತಿವಾಹಕ ವಸ್ತುಗಳ ಬಳಕೆ ತಂತ್ರಜ್ಞಾನದ ಎಲ್ಲಾ ಕ್ಷೇತ್ರಗಳಲ್ಲೂ ಕ್ರಾಂತಿಕಾರಕ ಬದಲಾವಣೆಗಳನ್ನು ತರಲಿದೆ. ಈಗಿರುವ ಎಷ್ಟೋ ಅಡೆತಡೆಗಳನ್ನು ನಾಶ ಮಾಡುವ ಮೂಲಕ ಬಂದು ಹೊಸ ಜಗತ್ತಿಗೆ ದಾರಿ ತೋರಿಸಲಿದೆ.

ಅತಿವಾಹಕ ವಸ್ತುಗಳ ಮುಖ್ಯ ಉಪಯೋಗ ವಿದ್ಯುತ್ ಶಕ್ತಿ ಉತ್ಪಾದನಾ, ವಿತರಣಾ ಯಂತ್ರ ಸಮುಚ್ಚಯಗಳಲ್ಲಿ. ಈ ರೀತಿಯ ಯಂತ್ರಗಳ ಗುಣಸಾಮರ್ಥ್ಯಕ್ಕೆ ಈವರೆಗೆ ಮಿತಿ ಇದ್ದದ್ದು ಮುಖ್ಯವಾಗಿ ಈ ಯಂತ್ರಗಳಲ್ಲಿ ಬಳಸುವ ಸಾಮಾನ್ಯ ವಾಹಕ ಲೋಹಗಳ ರೋಧಕ ಶಕ್ತಿಯಿಂದ [resistance] ಅತಿವಾಹಕ ವಸ್ತುಗಳ ಶೂನ್ಯ ರೋಧಕ ಶಕ್ತಿಯಿಂದಾಗಿ ಈ ಯಂತ್ರಗಳು ಹೆಚ್ಚಿನ ವಿದ್ಯುತ್ ಉತ್ಪಾದನೆ ಮಾಡುವ ಸಾಧ್ಯತೆ ಇದೆ. ವಿದ್ಯುತ್ ತಂತಿಗಳ ರೋಧಕ ಶಕ್ತಿಯಿಂದಾಗಿ ಸಾವಿರಾರು ಕಿಲೋವಾಟುಗಳಷ್ಟು ಶಕ್ತಿ ವ್ಯರ್ಥವಾಗಿ ಹೋಗುತ್ತಿದೆ. ಶೂನ್ಯ ರೋಧಕ ಶಕ್ತಿಯ ಅತಿವಾಹಕ ವಿದ್ಯುತ್ ತಂತಿಗಳು ಉಪಯೋಗಿಸಿದಾಗ ಹೆಚ್ಚು ಕಡಿಮೆ ಪೋಲಾಗುವ ವಿದ್ಯುತ್‌ಶಕ್ತಿಯ ಪ್ರಮಾಣ ಶೂನ್ಯವಾಗುತ್ತದ. ಹಲವಾರು ಕಡೆ ಭಾರಿ ಪ್ರಮಾಣದ ವಿದ್ಯುತ್ ಕಾಂತ (electro magnet) ಗಳನ್ನು ಉಪಯೋಗಿಸುತ್ತಾರೆ. ಅತಿವಾಹಕ ವಸ್ತುಗಳಿಂದ ಮಾಡಿದ ವಿದ್ಯುತ್ ಕಾಂತಗಳಲ್ಲಿ ಒಮ್ಮೆ ವಿದ್ಯುತ್ ಹರಿಸಿ ಬಿಟ್ಟರೆ ವರ್ಷಗಟ್ಟಲ ವಿದ್ಯುತ್ ಕಾಂತ ಶಕ್ತಿ ಕುಂದದ ಇರುತ್ತದ.

ಈಗಾಗಲೇ ಕಾಂತ ಶಕ್ತಿಯಿಂದ ನೆಲದಿಂದ ಎತ್ತಲ್ಪಟ್ಟ ಅತ್ಯಂತವೇಗದ ರೈಲುಬಂಡಿಗಳ ರಚನ ಮಾಡಲಾಗಿದ. ಅತಿವಾಹಕ ವಸ್ತುಗಳ ವಿದ್ಯುತ್ ಕಾಂತಗಳಿಂದ ಕಡಿಮೆ ವೆಚ್ಚದಲ್ಲಿ ಇದು ಸಾಧ್ಯವಾಗುತ್ತದ. ವೇಗದ ರೈಲುಗಳ ಈ ಯೋಜನೆಯನ್ನು ಸಾರ್ವತ್ರೀಕರಿಸಬಹುದು. ಈ ರೈಲುಗಳು ನೆಲವನ್ನು ಬಿಟ್ಟು, ಮೇಲೆ ಹೆಚ್ಚು ಕಡಿಮೆ ಗಾಳಿಯಲ್ಲ ಚಲಿಸುತ್ತವೆ.

ಅತಿವಾಹಕ ವಸ್ತುಗಳ ಉಪಯೋಗದಿಂದ ಅತ್ಯಂತ ವೇಗವಾಗಿ ಕೆಲಸ ಮಾಡುವ ಎಲೆಕ್ಟ್ರಾನಿಕ್ ಭಾಗಗಳನ್ನು ತಯಾರಿಸಬಹುದು. ಇವು ಅತ್ಯಂತ ವೇಗದ ಸೂಪರ್ ಕಂಪ್ಯೂಟರ್‌ಗಳ ವಿನ್ಯಾಸದಲ್ಲಿ ಪ್ರಮುಖವಾಗುತ್ತದೆ.

ಅತಿವಾಹಕ ವಸ್ತುಗಳು ಇನ್ನೂ ಹಲವಾರು ನಾವು ಈಗ ಊಹಿಸಲು ಸಾಧ್ಯವಾಗದ ಕ್ಷೇತ್ರಗಳಲ್ಲಿ ಬಳಸಲ್ಪಡಬಹುದು. ಒಂದು ವರ್ಷದ ವೇಗವಾದ ಬೆಳವಣಿಗೆಯಿಂದಾಗಿ ಅತಿವಾಹಕತೆಗಳ ಎಲ್ಲಾ ಉಪಯೋಗಗಳ ಬಗ್ಗೆ ಯೋಚಿಸಲು ಸಮಯ ಸಿಕ್ಕಿಲ್ಲ.

ಮುಂದಿನ ದಾರಿ

ಆದರೆ ಅತಿವಾಹಕ ವಸ್ತುಗಳನ್ನು ದಿನನಿತ್ಯದ ಮತ್ತು ಇತರ ಕೈಗಾರಿಕಾ ಉಪಯೋಗಗಳಿಗೆ ಬಳಸುವ ದಾರಿ ಸುಗಮವಾಗೇನು ಇಲ್ಲ.

ಈ ಬಗ್ಗೆ ಸಾಕಷ್ಟು ಸಂಶೋಧನೆ, ಅಧ್ಯಯನ ನಡೆಯಬೇಕಾಗಿದೆ. ಆದರೆ ಇವೆಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಸಾಧ್ಯವಿದೆಎಂಬುದು ವಿಜ್ಞಾನಿಗಳ ಅಭಿಪ್ರಾಯ.

ಅತಿವಾಹಕತೆಯ ಈ ವಿಶಿಷ್ಟ ಬೆಳವಣಿಗೆ ಕೇಂದ್ರ ಸರ್ಕಾರದ ಗಮನ ಸೆಳೆದಿವ. ಕೇಂದ್ರ ಸರ್ಕಾರ ಅಣುಶಕ್ತಿ ಕಮಿಶನ್ ಮಾದರಿಯಲ್ಲ "ಅತಿವಾಹಕ ಕಮಿಶನ್" ಒಂದನ್ನು ರಚಿಸಿದ. ಈ ಕಮಿಶನ್ ಅತಿವಾಹಕಗಳ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ ಸಂಶೋಧನಗಳನ್ನೂ ಚಟುವಟಿಕಗಳನ್ನು ಸುವ್ಯವಸ್ಥಿತವಾಗಿ ನಡಸುವ, ಕ್ರೋಢೀಕರಿಸುವ ಜವಾಬ್ದಾರಿ ಹೊಂದಿದ. ಈಗಾಗಲೇ ಸಿದ್ಧವಾಗಿರುವ ಅತಿವಾಹಕ ವಸ್ತುಗಳ ಭಾಗವಾದ ಅಪರೂಪದ ಹಲವು ಮೂಲಭೂತ ವಸ್ತುಗಳಆಕ್ಸೈಡ್‌ಗಳು ಭಾರತದಲ್ಲ ಸಾಕಷ್ಟು ಪ್ರಮಾಣದಲ್ಲ ದೊರಕುತ್ತವೆ. ಇದರ ರಫ್ತನ್ನು ಸರ್ಕಾರ ನಿಷೇಧಿಸಿದ. ಇದು ಸ್ವಾಗತಾರ್ಹ ಅಂಶ.

ಅತಿವಾಹಕ ಕಮಿಶನ್ ಸಂಶೋಧನೆಯನ್ನು ಬಲಪಡಿಸುವುದಲ್ಲದ ಇದರ ಉಪಯೋಗ ಪಡಯಬಲ್ಲ ಕೈಗಾರಿಕಾ ಸಂಸ್ಥೆಗಳನ್ನು (ಉದಾ : BHEL) ಇದರಲ್ಲ ತೊಡಗಿಸಿಕೊಳ್ಳಬೇಕಾದ್ದು ಅಗತ್ಯ. ಇಲ್ಲವಾದರೆ ಅತಿವಾಹಕತೆಯ ಜ್ಞಾನವನ್ನು ಬಳಸುವುದರಲ್ಲಿ ಹಿಂದುಳಿಯಬೇಕಾದತು. ಈಗಿರುವ ಅತಿವಾಹಕ ಸಂಶೋಧನಾ ಗುಂಪು ಬಹಳ ಸಣ್ಣದು. ಅತಿವಾಹಕತೆಯ ರಾಷ್ಟ್ರೀಯ ಪ್ರಾಮುಖ್ಯತೆ ದೃಷ್ಟಿಯಿಂದ ಸಂಶೋಧನೆಯನ್ನು ವ್ಯಾಪಕ ತಳಹದಿಯ ಮೇಲೆ ಪುನರ್‌ರಚಿಸಬೇಕು. ಇಲ್ಲವಾದರೆ ಇದು ಈ ಸೀಮಿತ ಗುಂಪುಗಳ ಸ್ಥಾಪಿತ ಹಿತಾಸಕ್ತಿಯಾಗುವ ಅಪಾಯವಿದೆ.

ಈಗಾಗಲೇ IBM ಮತ್ತು ಬೆಲ್ ಪ್ರಯೋಗ ಶಾಲೆಯಂತಹ ದೊಡ್ಡ ಬಹುರಾಷ್ಟ್ರೀಯ ಸಂಸ್ಥೆಗಳು ಅತಿವಾಹಕ ವಸ್ತುಗಳಾದ ಒಂದು ವರ್ಗದ ವಸ್ತುಗಳನ್ನು ಪೇಟೆಂಟ್ ಮಾಡಲು ಪ್ರಯತ್ನಿಸುತ್ತಿವೆ. ವಾಣಿಜ್ಯ ಮಹತ್ವದಿಂದಾಗಿ ಇದ್ದಕ್ಕಿದ್ದ ಹಾಗೆ ಇದು ಗೋಪ್ಯ ಸಂಶೋಧನೆಯಾಗಿದೆ. ಅತಿವಾಹಕತೆಯ ಕ್ಷೇತ್ರದಲ್ಲಿ ನಮ್ಮ ಪ್ರಯತ್ನಗಳಿಗೆ ಈ ಕಂಪನಿಗಳು ಅಡ್ಡಗಾಲು ಹಾಕದಂತೆ ಅಪ್ರತ್ಯಕ್ಷ ಅಡೆತಡೆ ತರದಂತೆ ಜಾಗರೂಕತೆ ವಹಿಸುವುದು ಮುಖ್ಯ. ಹಿಂದಿನ ಉಚ್ಛ ತಂತ್ರಜ್ಞಾನಗಳಂತೆ ಇದೂ ಬಹುರಾಷ್ಟ್ರೀಯ ಸಂಸ್ಥೆಗಳ ಸ್ವತ್ತಾಗದಂತೆ ಜಾಗರೂಕತೆ ವಹಿಸುವುದು ಸರ್ಕಾರದ ಮತ್ತು ದೇಶಪ್ರೇಮಿ ಜನತೆಯ ಕರ್ತವ್ಯ.

"ಅತಿವಾಹಕತೆ ಎಂದರೇನು ?"

ಲೋಹಗಳು ವಿದ್ಯುತ್ತಿಗೆ ಒಳ್ಳೆಯ ವಾಹಕಗಳು ಲೋಹಗಳಲ್ಲದ ವಸ್ತುಗಳು ಒಳ್ಳೆಯ ವಾಹಕಗಳಲ್ಲ ಎಂಬುದು ಪ್ರತಿ ಹೈಸ್ಕೂಲ್ ವಿದ್ಯಾರ್ಥಿಗೂ ತಿಳಿದಿರುವ ವಿಷಯ. ಆದರೆ ಅತ್ಯುತ್ತಮ ವಾಹಕಗಳು ಎನಿಸಿದ ಲೋಹಗಳಾದ ತಾಮ್ರ, ಅಲ್ಯುಮಿನಿಯಂಗಳಲ್ಲಿ ವಿದ್ಯುತ್ ಹರಿಸಿದಾಗಲೂ ಆಗುವ ನಷ್ಟ ಗಣನೀಯ. ಇದಕ್ಕೆ ಕಾರಣ ಲೋಹದಲ್ಲಿರುವ "ರೆಸಿಸ್ಟೆನ್ಸ್" (ರೋಧಕ ಶಕ್ತಿ) ಆದರೆ ವಿದ್ಯುತ್ತಿನ ಹರಿಯುವಿಕೆಗೆ ಯಾವ ಅಡ್ಡಿಯೂ ಇಲ್ಲದೆ ನೂರಕ್ಕೆನೂರು ಪಾಲು ವಿದ್ಯುತ್ ದೊರೆಯುವುದಾದರೆ! ಅಗಾಧಶಕ್ತಿ ಉಳಿಯುವುದು ಮಾತ್ರ ಸಾವಿರಾರು ಪ್ರಯೋಜನಗಳಿವೆ.

ರಾಜ್ಯಾದ್ಯಾಂತ ಬಿರುಸಿನಿಂದ ಸಿದ್ದ ಗೊಳ್ಳುತ್ತಿರುವ ರೈತ ಸಂಘ

1936ರಲ್ಲಿ 51 ವರ್ಷಗಳ ಹಿಂದೆ ರೂಪಿತವಾದ ಅಖಿಲ ಭಾರತ ಕಿಸಾನ್ ಸಭಾ 1987ರ ಸೆಪ್ಟೆಂಬರ್ 7 ರಿಂದ 13ರವರೆಗೆ ಅಖಿಲ ಭಾರತ ಮಟ್ಟದ ರೈತ ಹೋರಾಟದ ಐತಿಹಾಸಿಕ ಕರೆ ನೀಡಿದೆ. ಬೇರೆ ಬೇರೆ ರಾಜ್ಯಗಳಲ್ಲಿ ರೈತರು ನಡೆಸಿದ, ನಡೆಸುತ್ತಿರುವ ಧೀರ ಹೋರಾಟಗಳನ್ನು ಒಗ್ಗೂಡಿಸುವ ಮೊದಲ ಹೆಜ್ಜೆಯಾಗಿ ಈ ಕರೆ ಭಾರತದ 22 ರಾಜ್ಯಗಳಲ್ಲಿಯೂ ಪ್ರತಿಧ್ವನಿಗೊಳ್ಳಲಿದೆ:

ರೈತರು, ಸಾಮಾನ್ಯ ಜನರು, ಭಾಷಾವಾರಾಗಿ, ಧರ್ಮವಾರಾಗಿ,ಜಾತಿವಾರಾಗಿ,ಪರಸ್ಪರ ಹೊಡೆದಾಟಕ್ಕೆ ಇಳಿಯುತ್ತಿರುವ ಈ ಸಮಯದಲ್ಲಿ ಭಾಷಾ ಬೇಧಗಳನ್ನು ಹಾಗೂ ಧರ್ಮಭೇದಗಳನ್ನು ಮೀರಿದ ರೈತರ,ಕೃಷಿಕಾರ್ಮಿಕರ ಐಕ್ಯತೆಯನ್ನು ಈ ಹೋರಾಟ ನಿರೂಪಿಸುತ್ತದೆ.

ಸ್ವಾತಂತ್ರ್ಯ ನಂತರದ 40ವರ್ಷಗಳ ಬೆಳವಣಿಗೆಯಲ್ಲಿ ಅಸಮತೋಲನೆಎಲ್ಲಾ ರಾಜ್ಯಗಳರೈತರ ಬದುಕನ್ನು ಹೀನಸ್ಥಿತಿಗೆಕೊಂಡಯ್ದಿದಿದೆ. ಕೇಂದ್ರ ಸರ್ಕಾರದಲ್ಲಿಯೇ ಆರ್ಥಿಕ, ರಾಜಕೀಯ ಅಧಿಕಾರಗಳ ಕೇಂದ್ರೀಕರಣ ಗೊಂಡುದರ ಫಲವಾಗಿ ಕೃಷಿಯ ಬಹು ಮುಖ್ಯ ಪ್ರಶ್ನೆಗಳು ಇತ್ಯರ್ಥವಾಗದೆ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿಯೇ ಇರಿಸಿದೆ. ಕೃಷಿಯ ಫಸಲಿಗೆ ಬೆಲೆಯ ನಿರ್ಣಯ ಹಾಗೂ ಕೃಷಿಪರಿಕರಗಳ ಬೆಲೆಯ ನಿರ್ಣಯ (ಶೇಕಡ 23ರಷ್ಟು ರಸಗೊಬ್ಬರದ ಬೆಲೆ ಏರಿಸುವ ಸರ್ಕಾರ ಶೇಕಡ 2ರಷ್ಟು ಭತ್ತದ ಬೆಲೆ ಏರಿಸುತ್ತದೆ.) ಎಲ್ಲಾ ಜನಸಾಮಾನ್ಯರ ಜೊತೆಗೆ ರೈತರು ಕೊಳ್ಳಬೇಕಾದ ವಸ್ತುಗಳ ಬೆಲೆ ಏರಿಕೆ-ಕೃಷಿ ಫಸಲುಗಳನ್ನು ಕೊಳ್ಳುವ ಆಹಾರ ನಿಗಮ -ಹತ್ತಿನಿಗಮ -ಕಾಫಿ ನಿಗಮ -ತಂಬಾಕು ಮಂಡಳಿ ಇತ್ಯಾದಿ ಸರ್ಕಾರಿ ಸಂಸ್ಥೆಗಳು ಜೊತೆಗೆ ನಬಾರ್ಡ ಬ್ಯಾಂಕ್‌ಗಳು ಹಾಗೂ ಕೃಷಿ ಕಾರ್ಮಿಕರ ರಕ್ಷಣೆಗಾಗಿ ಅಖಿಲಭಾರತ ಕಾನೂನನ್ನು ನಿರೂಪಿಸಲು ನಿರಾಕರಣೆ ಇತ್ಯಾದಿ ಇದರ ಫಲವಾಗಿಯೇ ಅಖಿಲ ಭಾರತ ಹೋರಾಟದ ಅವಶ್ಯಕತೆ.

ಬಂಧನ ಕಾರ್ಯಕ್ರಮ

ಇಡೀ ರಾಜ್ಯದಲ್ಲಿ ಸೆಪ್ಟೆಂಬರ್ 7 ರಂದು ಉದ್ಘಾಟನೆಯಾಗುವ ಪಿಕೆಟಿಂಗ್ ಕಾರ್ಯಕ್ರಮದಲ್ಲಿ 16 ಜಿಲ್ಲಾ ಕೇಂದ್ರಗಳಲ್ಲಿ ಐವತ್ತು ಸಾವಿರ ಜನ ರೈತರು ಭಾಗವಹಿಸಿ ಬಂಧನಕ್ಕೆ ಒಳಗಾಗುತ್ತಾರೆ. ಬೆಂಗಳೂರು ಜಿಲ್ಲೆಯಲ್ಲಿ ದಕ್ಷಿಣ ತಾಲ್ಲೋಕು ಕಛೇರಿಯನ್ನು ಎರಡು ದಿನ, ನಗರ ಜಿಲ್ಲಾಧಿಕಾರಿಗಳ ಕಛೇರಿಯನ್ನು ಒಂದು ದಿನ ದೊಡ್ಡ ಬಳ್ಳಾಪುರ ತಾಲ್ಲೂಕು ಕಛೇರಿಯ ಒಂದು ದಿನ, ಹೋಸಕೋಟೆ ಕಛೇರಿಯನ್ನು ಒಂದು ದಿನ, ಪಿಕೆಟಿಂಗ್ ನಡೆಸಲಾಗುತ್ತದೆ. ಕೊನೆಯದಾಗಿ 11-9-87 ರಂದು ದೊಡ್ಡ ಸಂಖ್ಯೆಯಲ್ಲಿ ರೈತರು ರಾಜಭವನ ಮುಂದೆ ಪಿಕೆಟಿಂಗ್ ನಡೆಸಲು ತೀರ್ಮಾನಿಸಲಾಗಿದೆ ಎಂದು ರೈತ ಸಂಘದ ರಾಜ್ಯ ಸಮಿತಿ ಪತ್ರಿಕಾ ಪ್ರಕಟಣೆ ತಿಳಿಸಿದೆ. ○

ಕೃಷ್ಣಾಮೇಲ್ದಂಡೆ ಯೋಜನೆಗಾಗಿ ಒತ್ತಾಯ

ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಶೀಘ್ರದಲ್ಲೇ ಜಾರಿಗೊಳಿಸಿ ಉತ್ತರ ಕರ್ನಾಟಕದ ಗುಲ್ಬರ್ಗಾ, ಬಿಜಾಪುರ, ಹಾಗೂ ರಾಯಚೂರು ಜಿಲ್ಲೆಯ 21 ಲಕ್ಷ ಎಕರೆ ಭೂಮಿಗೆ ನೀರೋದಗಿಸಲು ಒತ್ತಾಯಿಸಿ ಆಗಸ್ಟ 10 ರಂದು ಭೀಮರಾಯನ ಗುಡಿಯಲ್ಲಿ ಸಾವಿರಾರು ರೈತರು ಬೃಹತ್ ಮತ ಪ್ರದರ್ಶನ ನಡೆಸಿ ಸಮಾವೇಶ ಗೊಂಡರು.

ಬಿಜಾಪುರ ಜಿಲ್ಲೆಯ ಇಂಡಿ, ಸಿಂದಗಿ, ಬಾಗೇವಾಡಿ, ಹನಗುಂದ ದಿಂದ ರೈತ ಕಾರ್ಯಕರ್ತರು ಸುರಿಯುತ್ತಿರುವ ಮಳೆಯನ್ನು ಲೆಕ್ಕಿಸದೆ ಕಾಲು ಜಾಥ, ಸೈಕಲ್ ಜಾಥಗಳ ಮುಖಾಂತರ ಬಂದು ತಲುಪಿದರು.

ರಾಯಚೂರು ಜಿಲ್ಲೆ ದೇವದುರ್ಗ, ಗುಲ್ಬರ್ಗಾ ಜಿಲ್ಲೆಯ ಶಹಾಪುರ, ಜೇವರ್ಗಿ ಸುರಪುರ, ತಾಲೋಕುಗಳಿಂದ ಟ್ರ್ಯಾಕ್ಟರ್, ಕಾಲ್ನಡೆ ಜಾಥಾ ನಡೆಸಿ ಸಮಾವೇಶದ ಸ್ಥಳ ತಲುಪಿದರು. ಮೂರು ಜಿಲ್ಲೆಗಳ ಸಹಸ್ರಾರು ರೈತರು ಬಸ್ ನಿಲ್ದಾಣದಿಂದ ಕೆಂಬಾವುಟ ಹಿಡಿದು ಘೋಷಣೆ ಕೂಗುತ್ತಾ ಹೊರಟ ಮೆರವಣಿಗೆ ಯು. ಕೆ. ಪಿ. ಕಛೇರಿ ತಲುಪಿತು. ಕೋಟಿಗಟ್ಟಲೆ ಹಣವನ್ನು ನುಂಗಿ ಹಾಕಿದ ಭ್ರಷ್ಟಾಚಾರಿ ಇಂಜಿನಿಯರ್‌ಗಳು ತಲೆ ತಪ್ಪಿಸಿಕೊಂಡಿದ್ದರು. ಪ್ರಾಮಾಣಿಕ ಚೀಫ್ ಇಂಜಿನಿಯರ್ ಎಂದು ಹೆಸರು ಪಡೆದ ಉಮಾಪತಿರಾವ್ ಕಂಡು ರೈತ ಪ್ರತಿನಿಧಿಗಳು ಮಾತುಕತೆ ನಡೆಸಿದರು.

ಸತ್ಯಾಗ್ರಹದ ನಂತರ ನಡೆದ ಬಹಿರಂಗ ಸಭೆಯಲ್ಲಿ ರೈತ ಸಂಘದ ರಾಜ್ಯ ಸಮಿತಿ ಸದಸ್ಯರಾದ ಕಾ|| ಮಾರುತಿ ಮಾನ್ಪಡೆ ಸ್ವಾಗತಿಸಿದರು. ಸಿ. ಪಿ. ಐ. (ಎಂ) ಪಕ್ಷದ ಶಾಸಕರು ರೈತ ಸಂಘದ ಉಪಾಧ್ಯಕ್ಷರು ಆದ ಕಾ|| ಆರ್. ವೆಂಕಟರಾಮಯ್ಯನವರು ಮುಖ್ಯ ಅತಿಥಿಗಳಾಗಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ರೈತ ಸಂಘದ ರಾಜ್ಯ ಮುಖಂಡರಾದ ಕಾ|| ಚಂದ್ರಶೇಖರಬಾಳೆ,ಕಲ್ಲಪ್ಪ ಕಿರಣಗಿಯವರುಗಳು ಸಭೆಯಲ್ಲಿ ಮಾತನಾಡಿದರು. ರಾಜ್ಯ ಉಪಾದ್ಯಕ್ಷ ಕಾ|| ಭೀಮಸಿ ಕಲಾದಗಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೊನೆಯಲ್ಲಿ ವಕೀಲರಾದ ಕಾ|| ಅಗಸ್ಟಿನ್ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು. ಆಯಾ ಪ್ರದೇಶಗಳ ರೈತ ಸಂಘದ ಘಟಕಗಳ ಸಮಾವೇಶಗಳನ್ನು ಏರ್ಪಡಿಸಿ ಸೆಪ್ಟೆಂಬರ್ ಪಿಕೆಟಿಂಗ್ ಚಳುವಳಿಯನ್ನು ಯಶಸ್ವಿಗೊಳಿಸಲು ಶ್ರಮಿಸುವಂತೆ ತನ್ನ ಎಲ್ಲಾ ಘಟಕಗಳಿಗೆ ಸಮಾವೇಶ ಕರೆ ನೀಡಿತು. ○

ವಿವಿಧ ಜಿಲ್ಲೆಗಳಲ್ಲಿ ಸಿದ್ಧತೆ

ಬಿಜಾಪುರ

ಬಿಜಾಪುರ ಜಿಲ್ಲಾ ರೈತಸಂಘದ ಸಭೆ ಆಗಸ್ಟ 26ರಂದು ನಡೆದು ಸೆಪ್ಟೆಂಬರ್ ಪಿಕೆಟಿಂಗ್ ಚಳುವಳಿಯನ್ನು ಜಿಲ್ಲೆಯಾದ್ಯಾಂತ ಯಶಸ್ವಿಗೊಳಿಸಲು ನಿರ್ಧರಿಸಿತು. ಮುಳವಾಡ ಏತ ನೀರಾವರಿ ಹಾಗೂ ಅಲಮಟ್ಟಿ 1720 ಪೂಟು ಮಾಡಬೇಕು, ಹಿಪ್ಪರಿಗಿ ಅಣೆ ಕಟ್ಟು ಶೀಘ್ರ ಮುಗಿಸಬೇಕು ಯು.ಕೆ. ಪಿ. ಭ್ರಷ್ಟಾಚಾರ ನಿಲ್ಲಬೇಕೆಂಬ ಹಲವಾರು ಸ್ಥಳೀಯ ಬೇಡಿಕೆಯನ್ನಿಟ್ಟು ಬಿಜಾಪುರ, ಬಸವನಬಾಗೇವಾಡಿ, ಸಿಂದಗಿ, ಇಂಡಿ, ಜಮಖಂಡಿ, ಮುದ್ದೆಬಿಹಾಳ, ಮುದೋಳ, ಹುನಗುಂದ ತಾಲೋಕುಗಳಲ್ಲಿ ಕೇಂದ್ರ-ರಾಜ್ಯ ಸರ್ಕಾರಿಕಛೇರಿ ಪಿಕೆಟಿಂಗ್‌ನಲ್ಲಿ ಸುಮಾರು 10,000 ಸಾವಿರ ಮಂದಿ ಬಂಧನಕ್ಕೊಳಗಾಗುವುದಾಗಿ ತೀರ್ಮಾನಿಸಲಾಯಿತು. ಬ.ಬಾಗೇವಾಡಿ 7, ಇಂಡಿ 8, ಸಿಂದಗಿ 9, ಬಿಜಾಪುರ 11 ರಂದು ಪಿಕೆಟಿಂಗ್ ನಡೆಸಲಾಗುವುದು.

ಆಗಸ್ಟ 2ರಂದು ಹುಬ್ಬಳ್ಳಿಯಲ್ಲಿ ಧಾರಾವಾಡ, ಬಿಜಾಪುರ, ಬೆಳಗಾಂ, ಕಾರವಾರ, ದಾವಣಗೆರೆ ಯಿಂದ ಭಾಗವಹಿಸಿದ್ದ ರೈತ ಮುಖಂಡರ ಸಭೆ ನಡೆಯಿತು. ಸೆಪ್ಟೆಂಬರ್ ಪಿಕೆಟಿಂಗ್ ಚಳುವಳಿ ಜಾರಿಯ ಕಾರ್ಯ ವಿಧಾನ ಕುರಿತು ಚರ್ಚಿಸಿ ಈ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಕಾ||ಭೀಮಸಿ ಕಲಾದಗಿಯವರು. ಅಧ್ಯಕ್ಷತೆ ವಹಿಸಿದ್ದರು.

ಗುಲ್ಬರ್ಗ

ರೈತ ಸಂಘದ ಸಭೆ ಆಗಸ್ಟ 13 ರಂದು ಕಾ|| ಅರುಣಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲೆಯಲ್ಲಿ ಪಿ ಕೆ ಟಿ ಂ ಗ್ ಯಶಸ್ವಿಗೊಳಿಸಲು ಮೂರು ಹಂತದ ಕಾರ್ಯಕ್ರಮ ರೂಪಿಸಲಾಯಿತು. ಹಳ್ಳಿಹಳ್ಳಿಗೆ ರೈತ ಜಾಥ, ಮಂಡಲ ಪಂಚಾಯ್ತಿ ಮಟ್ಟದ ಸಮಾವೇಶ, ಚಿತಾಪುರ, ಗುಲ್ಬರ್ಗಾ, ಶಹಪುರ,ಸುರಪುರ, ಜೇವರ್ಗಿ, ಆಳಂದ ತಾಲೋಕುಗಳಲ್ಲಿ ಪಿಕೆಟಿಂಗ್‌ಮಾಡಲು ನಿರ್ಧರಿಸಲಾಯಿತು. ಪದೇ ಪದೇ ಬರಗಾಲಕ್ಕೆ ತುತ್ತಾಗುವುದರಿಂದ ಶಾಶ್ವತ ಬರಗಾಲ ಪರಿಹಾರ ಯೋಜನೆ, ಗಂಡೊರಿನಾಲಾ ಯೋಜನೆ,ಅಮರ್ಜಾ ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿ, ಆಳಂದ ಸಕ್ಕರೆ ಕಾರ್ಖಾನೆ ಪೂರ್ಣಗೊಳಿಸಬೇಕು, ಕೃಷಿಸಾಲ, ಗೈರಾಣಿ ಜಮೀನು ಪಟ್ಟಾ, ಹಳ್ಳಿಗಳಿಗೆ ಕುಡಿಯುವ ನೀರು, ರಸ್ತೆ, ಆರೋಗ್ಯ ಘಟಕ ಮುಂತಾದ ಸ್ಥಳೀಯ ಬೇಡಿಕೆಯನ್ನಿಟ್ಟು ಪಿಕೆಟಿಂಗ್ ನಡೆಸಲಾಗುವುದು.

ಹಳ್ಳಿಗಳಿಗೆ ತೆರಳುವ ಜಾಥಾ ಸಂದರ್ಭದಲ್ಲಿ ರೈತ ವಾಣಿ ಪತ್ರಿಕೆ ಚಂದಾ, 2 ಸಾವಿರ ಬ್ಯಾಡ್ಜ ಮಾರಾಟ, ಸಹಸ್ರಾರು ರೈತರು ಪಿಕೆಟಿಂಗ್‌ನಲ್ಲಿ ಪಾಲ್ಗೊಳುವಂತೆ ಮಾಡಲು ನಿರ್ಧರಿಸಲಾಗಿದೆ.

ಸೌದತ್ತಿ

ಪ್ರಾಂತ ರೈತ ಸಂಘದ ತಾಲೋಕು ಘಟಕ 12 ಬೇಡಿಕೆಗಳನ್ನೊಳಗೊಂಡು ಸ್ಥಳೀಯ ಬೇಡಿಕೆಗಳಾದ ನಿವೇಶನ ಹಂಚಿಕೆ, ಜವುಳು-ಸವುಳು ಪ್ರದೇಶದ ಸುಧಾರಣೆ, ನೀರಿನ ಸೌಕರ್ಯ, ಐ. ಆರ್. ಡಿ. ಪಿ. ಎನ್. ಆರ್. ಇ. ಪಿ. ಯೋಜನೆಗಳ ಜಾರಿಗೆ ಒತ್ತಾಯಿಸಿ ತಾಹಶೀಲ್ದಾರ್ ಕಛೇರಿ ಪಿಕೆಟಿಂಗ್ ನಡೆಸಲು ನಿರ್ಧರಿಸಿದೆ. ಪ್ರತಿನಿತ್ಯ 200 ಮಂದಿಯಂತೆ ತಂಡ ತಂಡವಾಗಿ ಪಿಕೆಟಿಂಗ್ ನಡೆಸಲಾಗುವುದು.

ಆಗಸ್ಟ 20 ರಂದು ಸವದತ್ತಿ ನಗರದ ಸಾಲಫಲಾನುಭವಿಗಳ ಮೆರವಣಿಗೆ ನಡೆಸಿ ಬೇಡಿಕೆಗಳ ಮನವಿ ಪತ್ರವನ್ನು ಸಿಂಡಿಕೇಟ್‌ಬ್ಯಾಂಕ್ ವ್ಯವಸ್ಥಾಪಕರಗೆ ನೀಡಿ ಬಹಿರಂಗ ಸಭೆ ನಡೆಸಲಾಯಿತು. ಸಾಲವನ್ನು ನೀಡುವುದಾಗಿ ಅಧಿಕಾರಿಗಳು ಭರವಸೆ ನೀಡಿದರು. ನಂತರ ನಡೆದ ಸಭೆಯನ್ನುದ್ದೇಶಿಸಿ ರೈತ ಮುಖಂಡರಾದ ಕಾ|| ಎಸ್. ಎಚ್. ಕಪ್ಪಣ್ಣವರ್, ಹಟ್ಟಿಹೊಳಿ, ಶಂಬುಲಿಂಗ್, ಸೊನ್ನದ ಮಾತನಾಡಿದರು.

ಸಿಂಧನೂರು

ತಾಲೋಕಿನ ಪಗಂದಿನ್ನಿ, ಗೋರೆಬಾಳ್, ಬವಳಗೇರಾ, ವಿರುಪಾಪೂರ, ಮಂಡಳ ಪಂಚಾಯ್ತಿಗಳಲ್ಲಿ ಆಗಸ್ಟ 26 ರಿಂದ 28ರವರೆಗೆ ಕಾಲ್ನಡೆ ಜಾಥಾ ಆಗಸ್ಟ 30-31 ಟ್ರ್ಯಾಕ್ಟರ್ ಜಾಥಾ ಮೂಲಕ ಪ್ರಚಾರ ಕಾರ್ಯ ಮಾಡಿ ಸೆಪ್ಟೆಂಬರ್ 2 ರಂದು ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಸೆಪ್ಟೆಂಬರ್ 7 ರಿಂದ 11 ರವರೆವಿಗೂ ಕೇಂದ್ರ-ರಾಜ್ಯ ಸರ್ಕಾರದ ಕಛೇರಿಗಳ ಪಿಕೆಟಿಂಗ್ ತೀರ್ಮಾನಿಸಲಾಗಿದೆ.

ತುಮಕೂರು

ಆಗಸ್ಟ 24 ರಂದು ಶಿರಾ ತಾಲೋಕು ಕಳ್ಳಂಬೆಳ್ಳ ಹೋಬಳಿ ರೈತ-ಕೃಷಿ ಕೂಲಿಗಾರರ ಸಮಾವೇಶ ಉಮಾಪತಿ ಹಳ್ಳಿಯಲ್ಲಿ ನೆರವೇರಿತು. ಕಾ|| ಕಾಳೇಗೌಡ ಅಧ್ಯಕ್ಷತೆ ವಹಿಸಿದ್ದರು. ಮೊದಲಿಗೆ ರೈತ ಸಂಘದ ಅಧ್ಯಕ್ಷ ಕಾ|| ಟಿ. ಕೆ. ಗೋವಿಂದರಾಜು ಸ್ವಾಗತಿಸಿದರು.ಬಗುರ್‌ಹುಕುಂ ಸಾಗುವಳಿ ರೈತರ ಸಮಸ್ಯೆ ಹಾಗೂ ದೇಶದಾದ್ಯಂತ ನಡೆಯುತ್ತಿರುವ ಪಿಕೆಟಿಂಗ್ ಚಳುವಳಿಯ ಬೇಡಿಕೆ ಹೋರಾಟದ ಕುರಿತು ರೈತಸಂಘದ ಕಾರ್ಯದರ್ಶಿ ಕಾ|| ಎಚ್. ಸಿ. ಚನ್ನಪ್ಪ, ಸಂಚಾಲಕ ಕಾ|| ಆರ್. ಶ್ರೀನಿವಾಸ್, ಕಾರ್ಮಿಕ ಮುಖಂಡ ಕಾ|| ಕೆ. ಆರ್. ನಾಯಕ್ ಮುಂತಾದ ಹಲವಾರು ನಾಯಕರು ಮಾತನಾಡಿದರು.

ಬೆಂಗಳೂರು

ದೊಡ್ಡಬಳ್ಳಾಪುರದ ಹಲವಾರು ಗ್ರಾಮಗಳಿಂದ ಬಂದು ಸೇರಿದ್ದ 60 ಮಂದಿ ಕಾರ್ಯಕರ್ತರ ಶಿಬಿರ ನಂತರ ಬಹಿರಂಗ ಸಭೆ ಆಗಸ್ಟ 23 ರಂದು ದೊಡ್ಡ ಬೆಳಹೊಂಗಲದಲ್ಲಿ ನಡೆಯಿತು. ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕಾ|| ಪಿ. ಜಗನ್ನಾಥ್ ಅಧ್ಯಕ್ಷರಾದ ಕಾ|| ಮುಗವಾಳಪ್ಪ ಉಪಾಧ್ಯಕ್ಷರಾದ ಕಾ|| ರಾಮಭದ್ರಯ್ಯ ಕಾ|| ವೆಂಕಟರಾಮಯ್ಯ ಶಿಬಿರದಲ್ಲಿ ಮಾತನಾಡಿದರು. ಬೆಳವಂಗಲ ಮಧುರೆ ಸಾಸಲು, ಕಸಬಾ, ತೂಬಗೆರೆ ಹೋಬಳಿಗಳಲ್ಲಿ ಈಗಾಗಲೇ ರೈತ ಸಂಘದ ಕಾರ್ಯಕರ್ತರ ಕಾಲ್ನಡೆ ಜಾಥ, ಸಭೆ ನಡೆಸಲಾಗಿದೆ. ಆಗಸ್ಟ 31 ರಂದು ಮಧುರೆಯ ದೇವನಹಳ್ಳಿಯಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯಲ್ಲಿ ಕಾ|| ರಾಮಭದ್ರಯ್ಯ, ವೆಂಕಟರಾಮಯ್ಯ, ಕಾ|| ಎ. ವಿ. ರಮೇಶ ಮಾತನಾಡಿದರು. ಸೆಪ್ಟೆಂಬರ್ 7 ರಂದು ದೊಡ್ಡಬಳ್ಳಾಪುರ ತಾಲೋಕು ಕಛೇರಿ ಪಿಕೆಟಿಂಗ್ ನಡೆಸಲಾಗುವುದು.

ಕೆಂಗೇರಿ ತಾವರೆಕೆರೆ

ಆಗಸ್ಟ 31, ಸೆಪ್ಟೆಂಬರ್ 1ರಂದು ಎರಡು ಹೋಬಳಿಯಲ್ಲಿ ಬೆಂಗಳೂರು ದ. ತಾಲೋಕು ರೈತ ಸಂಘದ ಟೆಂಪೋ ಜಾಥಾ ಸುಮಾರು 60 ಗ್ರಾಮಗಳಲ್ಲಿ ರೈತರ ಸಭೆ ನಡೆಸಲಾಯಿತು. ಕಾ|| ಲಕ್ಕಣ್ಣ, ವೆಂಕಟಾಚಲಯ್ಯ ವಿದ್ಯಾರ್ಥಿ ಮುಖಂಡ ಕಾ|| ರಾಜಣ್ಣ ಜಾಥದಲ್ಲಿ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಎಸ್. ಎಫ್. ಐ. ಸಾಂಸ್ಕೃತಿಕ ತಂಡ ಕ್ರಾಂತಿಕಾರಿ ಹಾಡುಗಳ ಕಾರ್ಯಕ್ರಮ ನೀಡಿತು. ಸೆಪ್ಟೆಂಬರ್ 7 ರಂದು ಬೆಂಗಳೂರು ದ. ತಾಲೋಕು ಕಛೇರಿ ಪಿಕೆಟಿಂಗ್ ನಡೆಸಲಾಗುವುದು.

ಉತ್ತರಹಳ್ಳಿ ಹೋಬಳಿ

ಸೆಪ್ಟೆಂಬರ್ 5ರಂದು ಉ.ಹೋಬಳಿ ಗ್ರಾಮಗಳಿಗೆ ರೈತ ಸಂಘದ ಟೆಂಪೋ ಜಾಥ ಏರ್ಪಡಿಸಿ ರೈತರ ಸಭೆಗಳನ್ನು ನಡೆಸಲಾಗುತ್ತಿದೆ.

ಶಿಡ್ಲಘಟ್ಟ

ತಾಲೋಕನ್ನು ಎರಡು ಭಾಗವಾಗಿ ವಿಂಗಡಿಸಿ ಟೆಂಪೋ ಮತ್ತು ಟ್ರ್ಯಾಕ್ಟರ್ ನಲ್ಲಿ ರೈತ ಮುಂದಾಳುಗಳು ಮತ್ತು ಕಾರ್ಯಕರ್ತರನ್ನೊಳಗೊಂಡು ಹಳ್ಳಿಹಳ್ಳಿಗೆ ತೆರಳಿ ಗೋಡೆಬರಹ, ಕರಪತ್ರ ಹಂಚಿ ಗ್ರಾಮ ಸಭೆಗಳನ್ನು ನಡೆಸುತ್ತಾ ಪ್ರಚಾರ ಕಾರ್ಯ ನಡೆಯುತ್ತಿದೆ. ಸೆಪ್ಟೆಂಬರ್ 7ರಂದು ಶಿಡ್ಲಘಟ್ಟ ಟೌನ್‌ನಲ್ಲಿ ಮೆರವಣಿಗೆ ನಡೆಸಿ ತಂಡ ತಂಡವಾಗಿ ರಾಜ್ಯ-ಕೇಂದ್ರ ಸರ್ಕಾರಿ ಕಛೇರಿ ಪಿಕೆಟಿಂಗ್ ನಡೆಸಲಾಗುವುದೆಂದು ತೀರ್ಮಾನಿಸಿದೆ.

ಮಹಿಳೆಯರ ಬೆಂಬಲ

ದುಡಿಯುವ ಮಹಿಳೆಯರು ಎರಡು ತಂಡಗಳಾಗಿ ಹಳ್ಳಿಗಳಿಗೆ ತೆರಳಿ ಮಹಿಳೆಯರನ್ನು ಈ ಚಳುವಳಿಯಲ್ಲಿ ಭಾಗವಹಿಸುವಂತೆ ಪ್ರಚಾರ ಕಾರ್ಯ ಕೈಗೊಳ್ಳುವುದಾಗಿ ಆಗಸ್ಟ 23ರಂದು ಸೇರಿದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು ಎಂದು ಕಾ|| ಶಾಂತಕುಮಾರಿ ಯವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

1978 - 1987 : ತ್ರಿಪುರಾ ಸರ್ಕಾರದ 9 ವರ್ಷಗಳು

ತ್ರಿಪುರಾ ಎಂಬ ಹೆಸರು ಬಹಳ ಜನಗಳಿಗೆ ತಿಳಿದಿದ್ದೇ ಅಲ್ಲಿ ಎಡರಂಗ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ. ನಮ್ಮ ರಾಜ್ಯದ ಒಂದು ಜಿಲ್ಲೆಗಿಂತ ಕಡಿಮೆ ವಿಸ್ತೀರ್ಣ ಮತ್ತು ಜನಸಂಖ್ಯೆ ಇರುವ ಈ ರಾಜ್ಯದ ಸಾಧನೆಗಳು ಬೆಟ್ಟ ಕಚ್ಚುವಂತಹದ್ದು. ಇಡೀ ಈಶಾನ್ಯ ಭಾರತ ಜನಾಂಗೀಯ ಕಲಹದ ಹಾದಿಯಲ್ಲಿ ಸಾಗಿದೆ. ಈ ಸನ್ನಿವೇಶದಲ್ಲಿ ಬಂಗ್ಲಾದೇಶದ ಕಾಡು ಗುಡ್ಡಗಳಲ್ಲ ತರಬೇತಿ ಪಡೆಯುವ ಭಯೋತ್ಪಾದಕರ ಪ್ರಚೋದನೆಯನ್ನು ಮೆಟ್ಟಿನಿಂತು ಬಂಗಾಲಿ ಆದಿವಾಸಿ ಜನಗಳ ಐಕ್ಯತೆಯನ್ನು ಕಾಪಾಡುವುದು ಹೇಗೆ ? ಎಂಬುದರಲ್ಲಿ ಈ ಪುಟ್ಟ ರಾಜ್ಯದ ಮಾದರಿಯನ್ನು ಇಡೀ ದೇಶ ಅನುಸರಿಸಬೇಕಾಗಿದೆ.

ಜನವರಿ 4, 1978 ತ್ರಿಪುರಾದ ಜನತೆ ಮೊದಲ ಎಡರಂಗ ಸರ್ಕಾರವನ್ನು ಅಧಿಕಾರಕ್ಕೇರಿಸಿದ ದಿನ. ಅಂದಿನಿಂದ ಈ ಕಳೆದ - ಸುಮಾರು ಹತ್ತು ವರ್ಷಗಳು ಸಿ.ಪಿ.ಐ.(ಎಂ) ನೇತೃತ್ವದ ಎಡರಂಗ ಸರ್ಕಾರ ಅವಿರತ ಹೋರಾಟಗಳ ಮೂಲಕ ಗಳಿಸಿದ ಹಲವಾರು ಗಣನೀಯ ಸಾಧನೆಗಳ ಅವಧಿ ಸುಮಾರು 44%ರಷ್ಟು ಹರಿಜನ-ಗಿರಿಜನರಿರುವ ಈ ಪುಟ್ಟ ರಾಜ್ಯದ ಜನತೆಯಲ್ಲಿ ಈಗ ವ್ಯಕ್ತಗೊಳ್ಳುತ್ತಿರುವ ಮುಂದುವರಿದ ಸಾಮಾಜಿಕ ಪ್ರಜ್ಞೆ ಈ ಸಾಧನೆಗಳ ಸಾಮಾಜಿಕ ಪ್ರಭಾವದ ಫಲ.

ಎಡರಂಗ ಸರ್ಕಾರ ಅಧಿಕಾರ ವಹಿಸಿಕೊಂಡಾಗ ತ್ರಿಪುರಾದಲ್ಲಿನ್ನೂ ತುರ್ತುಪರಿಸ್ಥಿತಿಯ ಕರಾಳಛಾಯೆದಟ್ಟವಾಗಿತ್ತು. ಪ್ರಜಾಪ್ರಭುತ್ವದ ಗೋಣು ಮುರಿದಿತ್ತು. ಸಮಾಜ ವಿರೋಧಿ ಶಕ್ತಿಗಳ ಅಟ್ಟಹಾಸ ಎಲ್ಲೆಲ್ಲೂ ರಾಜ್ಯದ ಖಜಾನೆಯ ತಳ ಕಾಣುತ್ತಿತ್ತು. ನಿರುದ್ಯೋಗ, ಹಸಿವಿನಿಂದ ಸಾವು, ಪೋಲೀಸ್ ಕಿರುಕುಳ ಸರ್ವೇಸಾಮಾನ್ಯ. ಇವೆಲ್ಲವನ್ನು ಬದಲಾಯಿಸಿ ಪ್ರಜಾಪ್ರಭುತ್ವದ ಮರುಸ್ಥಾಪನೆ ಮಾಡಿದ್ದು ಎಡರಂಗ ಸರ್ಕಾರದ ಮೊದಲ ಸಾಧನೆ, ಪೋಲೀಸ್ ಮತ್ತು ಜೈಲು ವಾರ್ಡರ್‌ಗಳಿಗೂ ಸೇರಿದಂತೆ ಎಲ್ಲರಿಗೂ ಸಂಘಟನೆಯ ಹಕ್ಕು, ಆರ್ಡರ್ಲಿ ಪದ್ಧತಿವಿರುದ್ಧ (ಇವೆರಡು ಈಗಲೂ ರಾಜ್ಯದಲ್ಲಿ ಕೈಗೆಟುಕದ ಬೇಡಿಕೆ), ವಜಾ ಮಾಡಲ್ಪಟ್ಟ ನೌಕರರಿಗೆ ಮತ್ತೆ ಉದ್ಯೋಗ, ನೂರಾರು ತಾತ್ಕಾಲಿಕ ನೌಕರರ ಕೆಲಸದ ಸ್ಥಿರೀಕರಣ, ರಾಜಕೀಯ ಬಂದಿಗಳ ಬಿಡುಗಡೆ ಇತ್ಯಾದಿ ಪ್ರಜಾಪ್ರಭುತ್ವ ಕ್ರಮಗಳಿಂದಾಗಿ ಒಂದೆಡೆ ಪ್ರತಿಗಾಮಿ ಕೋಮುವಾದಿ ಶಕ್ತಿಗಳು ಸಂಚು ಮಾಡಿ ಸೃಷ್ಟಿಸಿದ ಕೋಮು ದಂಗೆಗಳನ್ನು ಇನ್ನೊಂದೆಡೆ ಬರ ಮತ್ತು ನೆರೆಯ ಪ್ರಾಕೃತಿಕ ತೊಂದರೆಗಳನ್ನು ಯಶಸ್ವಿಯಾಗಿ ಎದುರಿಸುವಲ್ಲಿ ಜನಸಾಮಾನ್ಯರ ಪೂರ್ಣಬೆಂಬಲ ಪಡೆಯುವುದು ಸಾಧ್ಯವಾಯಿತು.

ಪ್ರಜಾಪ್ರಭುತ್ವ ವಿಸ್ತರಣೆ

ಪ್ರಜಾಪ್ರಭುತ್ವದ ಮರುಸ್ಥಾಪನೆ ಇಲ್ಲದೆ ಅದನ್ನು ಇನ್ನಷ್ಟು ವಿಸ್ತರಿಸಿ ರಾಜ್ಯದ ಬಹುಪಾಲು ಗ್ರಾಮೀಣ ಮತ್ತು ಬುಡಕಟ್ಟು ಜನಸಮೂಹಗಳು ತಮ್ಮ ಅಭಿವೃದ್ಧಿ ಕಾರ್ಯಗಳಲ್ಲಿ ತಾವೇ ಪೂರ್ಣವಾಗಿ ಭಾಗವಹಿಸುವ ಅವಕಾಶ ನೀಡಿದ್ದು ತ್ರಿಪುರಾದ ಎಡರಂಗ ಸರ್ಕಾರದ(ಪಶ್ಚಿಮ ಬಂಗಾಳದಂತೆ) ವಿಶಿಷ್ಟ ಸಾಧನೆ. ಪಂಚಾಯತು ಚುನಾವಣೆಗಳನ್ನು ನಡೆಸಿ ಗ್ರಾಮೀಣ ಪಟ್ಟಭದ್ರಹಿತಾಸಕ್ತಿಗಳ ಹಿಡಿತವನ್ನು ಬಿಡಿಸಿ, 1983ರ ಪಂಚಾಯತಿ ಕಾನೂನು ಮೂಲಕ ಪಂಚಾಯತುಗಳ ಅಧಿಕಾರ ವ್ಯಾಪ್ತಿಯನ್ನು ಸಮಗ್ರಗೊಳಿಸಿ 89%ದಷ್ಟಿರುವ ಗಾಮೀಣ ಜನತೆಯ ಉತ್ಪಾದನಾಸಾಮರ್ಥ್ಯವನ್ನು ವಿನೋಚನೆ ಗೊಳಿಸಲಾಯಿತು ಮಾತ್ರವಲ್ಲ, ಬುಡಕಟ್ಟು ಸ್ವಾಯತ್ತ ಜಿಲ್ಲಾಮಂಡಳಿ ರಚಿಸಿ ಬುಡಕಟ್ಟು ಜನಾಂಗಗಳ ದೀರ್ಘಕಾಲದ ಶೋಷಣೆಯನ್ನು ಕೊನೆ ಗೊಳಿಸಲಾಯಿತು. ಇದನ್ನು ಸಂವಿಧಾನದ 6ನೇ ಶೆಡ್ಯೂಲ್ ಪ್ರಕಾರ ಜಾರಿಗೆ ತರಬೇಕೆಂಬ ಎಡರಂಗ ಸರ್ಕಾರ ಹಾಗೂ ತ್ರಿಪುರಾದ ಪ್ರಜಾಪ್ರಭುತ್ವವಾದಿಗಳ ಬೇಡಿಕೆಗೆ39 ತಿಂಗಳ ಹೋರಾಟದ ನಂತರ 1985 ರಲ್ಲಷ್ಟೇ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿತು ಎಂಬುದು ಇಲ್ಲಿ ಗಮನಾರ್ಹ. ಬುಡಕಟ್ಟು ಜನಾಂಗದವರ ಕೋಕ್‌ಬೊರಾಕ್ ಭಾಷೆಗೆ ಮಾನ್ಯತೆ, ಬುಡಕಟ್ಟು ಪ್ರದೇಶಗಳಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೌಲಭ್ಯಗಳ ವಿಸ್ತರಣೆ, ವಿೂಸಲಾತಿಯ ಕಟ್ಟುನಿಟ್ಟಾದ ಪಾಲನೆ ಮುಂತಾದ ಕ್ರಮಗಳಿಂದಾಗಿ ರಾಜ್ಯದಲ್ಲಿ ಬುಡಕಟ್ಟು ಜನತೆ ದೇಶದ ಬೇರೆಲ್ಲೂ ಕಾಣದ ರೀತಿಯಲ್ಲಿ ಎಲ್ಲಾ ಆರ್ಥಿಕ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶವಾಯಿತು.

ಗ್ರಾಮೀಣ ಆರ್ಥಿಕವನ್ನು ಸರಿಯಾದ ತಳಹದಿಯ ಮೇಲೆ ಸ್ಥಾಪಿಸುವಲ್ಲಿ ಮತ್ತು ತನ್ಮೂಲಕ ಗ್ರಾಮೀಣ ಸಾಲ ಭಾರವನ್ನು ತಗ್ಗಿಸುವಲ್ಲಿ ತ್ರಿಪುರಾದ ಎಡರಂಗ ಸರ್ಕಾರ ಕಳೆದ ಹತ್ತು ವರ್ಷಗಳಲ್ಲಿ ಗಮನಾರ್ಹ ಸಫಲತೆ ಪಡೆದಿದೆ.

ಕೈಗಾರಿಕೀಕರಣ

ರಾಜ್ಯದ ಕೈಗಾರಿಕೀಕರಣಕ್ಕೆ ಸರಿಯಾದ ದಿಕ್ಕು ನೀಡಲು ಮಾಡಿದ ಹಲವಾರು ಸಫಲ ಪ್ರಯತ್ನಗಳು ತ್ರಿಪುರಾ ಎಡರಂಗದ ಇನ್ನೊಂದು ಮಹತ್ವ ಪೂರ್ಣ ಸಾಧನೆ. ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಕೇಂದ್ರದೊಡನೆ ನಿರಂತರ ಮಾತುಕತೆ ಹೋರಾಟ, ಸಣ್ಣ

[5ನೇ ಪುಟ ನೋಡಿ]

ಚಕ್ಮಾ ನಿರಾಶ್ರಿತರ ಸಮಸ್ಯೆ

ಚಕ್ಮಾಗಳೆಂದರೆ ತ್ರಿಪುರಾ-ಬಾಂಗ್ಲಾದೇಶ ಗಡಿಯ ಚಿತ್ತಗಾಂಗ್ ಗುಡ್ಡ ಪ್ರದೇಶದ ಒಂದು ಭಾಗದಲ್ಲಿ ವಾಸಿಸುತ್ತಿರುವ ಒಂದು ಬುಡಕಟ್ಟು ಜನಾಂಗ. ಬ್ರಿಟೀಷರ ಕಾಲದಿಂದಲೂ ಇವರು ಪ್ರಾದೇಶಿಕ ಸ್ವಾಯತ್ತತೆ ಪಡೆದಿದ್ದರು. ಆದರೆ ಬಾಂಗ್ಲಾದೇಶ ರಚನೆಯ ನಂತರ ಸರ್ಕಾರ ಇದನ್ನು ಮಾನ್ಯ ಮಾಡದೆ ಅವರ ಮೇಲೆ ತೀವ್ರದಮನ ನಡೆಸಲಾರಂಭಿಸಿತು. ಮುಖ್ಯವಾಗಿ ಹೆಂಗಸರು, ಮಕ್ಕಳು ಮತ್ತುವಯಸ್ಸಾದವರ ಮೇಲಿನ ಅಮಾನುಷ ಅತ್ಯಾಚಾರಗಳಿಂದಾಗಿ 8 ತಿಂಗಳ ಹಿಂದೆ ಓಡಿಬಂದ 50,000 ನಿರಾಶ್ರಿತರು ಈಗ ತ್ರಿಪುರಾದಲ್ಲಿದ್ದಾರೆ. ಹಿಂದೆ ಎರಡು ಬಾರಿಯೂ ಹಾಗೆ ಓಡಿಬಂದಿದ್ದ ನಿರಾಶ್ರಿತರನ್ನು ವಾಪಾಸ್ಸು ಹೋಗುವಂತೆ ಒಪ್ಪಿಸುವುದು ಸಾಧ್ಯವಾಗಿತ್ತು. ಆದರೆ ಈಗ ಬಾಂಗ್ಲಾದೇಶ ಸರ್ಕಾರ ದಮನ ನಿಲ್ಲಿಸದೆ ಅವರನ್ನು ವಾಪಾಸು ಹೋಗಿ ಎಂದು ಹೇಳುವುದು ಅಮಾನವೀಯ.ಆದರೆ ಚಕ್ಮಾನಿರಾಶ್ರಿತರನ್ನು ತ್ರಿಪುರಾದಲ್ಲಿಟ್ಟುಕೊಂಡರೆ ಇನ್ನಷ್ಟು ಜನಾಂಗೀಯ, ರಾಜಕೀಯ, ಸಾಮಾಜಿಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಆದ್ದರಿಂದ ಇದನ್ನು ಕೇಂದ್ರ ಸರ್ಕಾರ ಅತ್ಯುಚ್ಚ ರಾಜಕೀಯ ಮಟ್ಟದಲ್ಲಿ ಬಾಂಗ್ಲಾದೇಶ ಸರ್ಕಾರದೊಂದಿಗೆ ಚರ್ಚಿಸಿ ಬಾಂಗ್ಲಾದೇಶ ಸರ್ಕಾರ ಚಕ್ಮಾಗಳ ನ್ಯಾಯಬದ್ಧ ಬೇಡಿಕೆಯನ್ನು ಮನ್ನಿಸುವಂತೆ ಮಾಡಬೇಕೆಂದು ಇತ್ತೀಚೆಗೆ ನಡೆದ ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ಸಭೆ ಒತ್ತಾಯಿಸಿದೆ.

ತ್ರಿಪುರಾ ಎಂಬ ವಿಶಿಷ್ಟ ಪುಟ್ಟ ರಾಜ್ಯ

1950 ರಲ್ಲಿಯೇ ಆರಂಭವಾದ ಆದಿವಾಸಿಗಳ ಚಳುವಳಿ

ತ್ರಿಪುರಾ, ಭಾರತಕ್ಕೆ ಅಂಟಿಕೊಂಡಿರುವುದು ಒಂದು ಕಡೆ ಮಾತ್ರ ಉಳಿದ ಮೂರುಕಡೆ ಬಾಂಗ್ಲಾದೇಶದ ಗಡಿ ಬರುತ್ತದೆ. ತ್ರಿಪುರಾದ ಉತ್ತರಕ್ಕೆ ಅಸ್ಸಾಂ ಹಾಗೂ ಪಶ್ಚಿಮದ ಒಂದು ತುದಿಯಲ್ಲಿ ಮಿಜೋರಾಂ ಇದೆ. ತ್ರಿಪುರಾಗಿರುವ ಏಕೈಕ ರಸ್ತೆ ಸಂಪರ್ಕ ಅಸ್ಸಾಂ ಮೂಲಕ. ಅಸ್ಸಾಮಿನ ದಕ್ಷಿಣದಲ್ಲಿರುವ ಸಿಲ್‌ಚಾರ್ ಮೂಲಕ ಹಾದು ಬರುವ ಈ ರಸ್ತೆ ಬಂದಾದರೆ ತ್ರಿಪುರಾದ ಉಸಿರು ಕಟ್ಟುತ್ತದೆ. ರೈಲು ದಾರಿ ಕೂಡಾ ಇದೇ ಮಾರ್ಗವಾಗಿ ತ್ರಿಪುರಾದ ಗಡಿಯವರೆಗೆ ಬಂದು, ಗಡಿಯಿಂದ ಹತ್ತು ಮೈಲಿ ಒಳಗಿರುವ ಧರ್ಮ ನಗರ್ ಎನ್ನುವಲ್ಲಿ ನಿಂತು ಬಿಡುತ್ತದೆ. ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಮಲತಾಯಿ ಧೋರಣೆ ತೋರಿಸುತ್ತಾ ಬಂದಿರುವ ಕೇಂದ್ರ ಸರ್ಕಾರಕ್ಕೆ ಈ ರೈಲು ದಾರಿಯನ್ನು ಮುಂದುವರಿಸುವ ಆಸಕ್ತಿ ಇಲ್ಲ.

ಕೇಂದ್ರದ ಮಲತಾಯಿ ಧೋರಣೆಯಿಂದಾಗಿ ಈಗ ತ್ರಿಪುರಾದಲ್ಲಿ ಡೀಸಲ್ ಮುಂತಾದ ಅಗತ್ಯ ವಸ್ತುಗಳಿಗೆ ಎಂತಹ ತೊಂದರೆಯಿದೆಯೆಂದರೆ ರೇಷನ್ ಕಾರ್ಡಿನ ಮೇಲೆ ಡೀಸಲ್ ಹಂಚಲಾಗುತ್ತಿದೆ. 'ಸಂಪರ್ಕ ವ್ಯವಸ್ಥೆ ಬೆಳೆಯದೆ ತ್ರಿಪುರಾದ ಬೆಳವಣಿಗೆ ಅಸಾಧ್ಯ' ಎನ್ನುವ ತ್ರಿಪುರಾದ ಮುಖ್ಯಮಂತ್ರಿ ಕಾ॥ ನೃಪೇನ್ ಚಕ್ರವರ್ತಿಯವರ ಎಲ್ಲಾ ಅಹವಾಲುಗಳೂ ಇಲ್ಲಿಯವರೆಗೆ ಕೇಂದ್ರದ ಕಿವುಡುತನಕ್ಕೆ ತಲುಪಿಯೇ ಇಲ್ಲ.

ಪ್ರಶಾಂತ್

ತ್ರಿಪುರಾದ ಬಹುಮುಖ್ಯ ಸಂಖ್ಯೆ ಆದಿವಾಸಿಗಳದ್ದು. ವಿಭಜನೆಯ ನಂತರ ಪೂರ್ವ ಬಂಗಾಲದಿಂದ ನಿರಾಶ್ರಿತರಾಗಿ ಬಂದ ಬಂಗಾಲಿಗಳದ್ದು ನಂತರದ ಸಂಖ್ಯೆ. ಹೀಗೆ ನಿರಾಶ್ರಿತರಾಗಿ ಬಂದ ಬಂಗಾಲಿಗಳೇ ಆದಿವಾಸಿಗಳ ಜಮೀನಿನ ಮೇಲೆ ಒಡೆತನ ಸ್ಥಾಪಿಸಿದ್ದು ಉಂಟು. ಹೀಗೆ ಕಿತ್ತುಕೊಂಡ ಜಮೀನನ್ನು ಆದಿವಾಸಿಗಳಿಗೆ ಹಿಂತಿರುಗಿಸುವುದೂ ಎಡ ಸರ್ಕಾರದ ಒಂದು ಮುಖ್ಯ ಕಾರ್ಯಕ್ರಮ.

ತ್ರಿಪುರಾದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಲವಾಗಿ ಬೇರು ಬಿಟ್ಟಿದೆ. ತ್ರಿಪುರಾದ ಪಾರ್ಟಿಯ ಹಿರಿಯ ನಾಯಕರಲ್ಲಿ ಅನೇಕರು ಆದಿವಾಸಿಗಳ ದಿಟ್ಟಹೋರಾಟದಮುಂಚೂಣಿಯಲ್ಲಿದ್ದವರು. ತ್ರಿಪುರಾದಲ್ಲಿ ಅಧಿಕೃತವಾಗಿ ಕಮ್ಯುನಿಸ್ಟ್ ಪಕ್ಷ ಪ್ರಾರಂಭವಾಗುವುದಕ್ಕೆ ಮುಂಚೆ ತ್ರಿಪುರಾದ ಆದಿವಾಸಿಗಳು ಅಲ್ಲಿನ ಮಹಾರಾಜನ ವಿರುದ್ಧ ಹಾಗೂ ಜಮೀನ್ದಾರರುಗಳ ವಿರುದ್ಧ ಭವ್ಯವಾದ ಹೋರಾಟಗಳನ್ನು ನಡೆಸಿದ್ದರು. ಅದರಲ್ಲಿ ರತನ್‌ಮುನಿ ಎಂಬಾತನ ನೇತೃತ್ವದಲ್ಲಿ ನಡೆದ ರಿಯಾನ್ ದಂಗೆ ಬಹಳ ಮುಖ್ಯವಾದದ್ದು.

1950 ರ ದಶಕದಲ್ಲಿ ಹಾಗೂ ಅದಕ್ಕೆ ಮೊದಲು ತ್ರಿಪುರಾದಲ್ಲಿ ಕಮ್ಯುನಿಸ್ಟರ ನೆಲೆ ಆದಿವಾಸಿಗಳ ನಡುವೆ. ಕಮ್ಯುನಿಸ್ಟ್ ಪಾರ್ಟಿಯನ್ನು ಎಲ್ಲರೂ ಆದಿವಾಸಿಗಳ ಪಕ್ಷ ಎಂದೇ ಕರೆಯುತ್ತಿದ್ದರು. ತ್ರಿಪುರಾದಲ್ಲಿ ಕಮ್ಯುನಿಸ್ಟರ ಪ್ರಾಬಲ್ಯ ತಪ್ಪಿಸಬೇಕೆಂದು ಕಾಂಗ್ರೆಸ್ಸಿನವರು ಹೊಸ ಯುಕ್ತಿಯೊಂದನ್ನು ಹೂಡಿದರು. ಪೂರ್ವ ಬಂಗಾಲದಿಂದ ವಲಸೆ ಬರುತ್ತಿದ್ದ ಬೆಂಗಾಲಿಗಳಿಗೆ ತ್ರಿಪುರಾದಲ್ಲಿ ನೆಲೆಸುವಂತೆ ಉತ್ತೇಜಿಸಿದರು. ಆ ಬೆಂಗಾಲಿಗಳನ್ನು ಬಳಸಿಕೊಂಡು ಕಮ್ಯುನಿಸ್ಟರಿಗೆ ವಿರೋಧವಾದ ನೆಲೆಯೊಂದನ್ನು ಸ್ಥಾಪಿಸುವ ಯೋಜನೆ ಕಾಂಗ್ರೆಸ್ಸಿಗರದು. 1952ರ ನಂತರ ತ್ರಿಪುರಾಕ್ಕೆ ವಲಸೆ ಬಂದ ಬೆಂಗಾಲಿಗಳ ಸಂಖ್ಯೆ ಹದಿನೆಂಟು ಲಕ್ಷ [ಶೇಕಡಾ 60ಕ್ಕೂ ಹೆಚ್ಚು] ಈ ಬೆಳವಣಿಗೆಯಿಂದಾಗಿ ಆ ಕಾಲದಲ್ಲಿ ಎಲ್ಲಾ ಬೆಂಗಾಲಿಗಳು ಕಾಂಗ್ರೆಸ್ಸಿಗರು ಎಲ್ಲಾ ಆದಿವಾಸಿಗಳು ಕಮ್ಯುನಿಸ್ಟರು ಎನ್ನುವ ಪರಿಸ್ಥಿತಿ ಇತ್ತು.

ಕಮ್ಯುನಿಸ್ಟ್ ಪಕ್ಷ ವಿಭಜನೆಯಾದಾಗ ತ್ರಿಪುರಾದ ನಾಯಕತ್ವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದೊಂದಿಗೆ ಬಂದಿತು. 1967 ರ ಬಾರಿಗೆ ರಚಿಸಿದರು. ನಂತರ ಪಕ್ಷ ಹಾಗೂ ಅವರ ಸಾಮೂಹಿಕ ಸಂಘಟನೆಗಳು ಗಣನೀಯ ಪ್ರಮಾಣದಲ್ಲಿ ಬೆಳೆದವು.

1980 ರ ವೇಳೆಗೆ 19 ಸಾವಿರ ಸದಸ್ಯರನ್ನು ಅಲ್ಲಿನ ರೈತ ಸಂಘ ಹೊಂದಿತ್ತು. ಅದರಲ್ಲಿ 12 ಸಾವಿರ ಸದಸ್ಯರು ಆದಿವಾಸಿಗಳು. ಇದಲ್ಲದೆ ಮಹಿಳಾ ಸಂಘಟನೆಯಲ್ಲಿ 47 ಸಾವಿರ ಸದಸ್ಯರಿದ್ದಾರೆ. ತ್ರಿಪುರಾದ ಮಹಿಳಾ ಸಂಘಟನೆಯಲ್ಲಿ ಹಳ್ಳಿಯ ರೈತ ಹೆಂಗಸರು ಪ್ರಮುಖ ಪಾತ್ರ ವಹಿಸಿದ್ದಾರೆ.

ತ್ರಿಪುರಾದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದದ್ದು 1977 ರಲ್ಲಿ. ಆ ಚುನಾವಣೆಯಲ್ಲಿ ಸಿ.ಎಫ್.ಡಿ. ಜೊತೆ ಮೈತ್ರಿ ಕೂಟ ರಚಿಸಿ ಅಧಿಕಾರಕ್ಕೆ ಬಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಿ.ಎಫ್.ಡಿ. ಜನತಾದಲ್ಲಿ ವಿಲೀನವಾದ ನಂತರ ಸ್ವಲ್ಪಕಾಲ ಜನತಾ ಪಕ್ಷದ ಜೊತೆ ಸರ್ಕಾರ ರಚನೆಯಲ್ಲಿ ಭಾಗವಹಿಸಿತು. 1978 ರಲ್ಲಿ ನಡೆದ ಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಹುಮತದಿಂದ ಆರಿಸಿ ಬಂದಿತು. ಈ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳೆನಿಸಿಕೊಂಡ ಉಳಿದ ಯಾವುದೇ ಪಕ್ಷವೂ ಒಂದು ಸ್ಥಾನವನ್ನೂ ಗಳಿಸಲಿಲ್ಲ ಆಗಿನ ತ್ರಿಪುರಾ ವಿಧಾನಸಭೆಯ ಪಕ್ಷನೋಟ :

ಸದಸ್ಯರ ಸಂಖ್ಯೆ	60
ಸಿಪಿಐ [ಎಂ]	52
ಆರ್.ಎಸ್.ಪಿ.	2
ಫಾರ್ವರ್ಡ್‌ಬ್ಲಾಕ್	1
ಸ್ವತಂತ್ರ ಅಭ್ಯರ್ಥಿ	1
ಎಡಸಂಯುಕ್ತರಂಗ	56
ತ್ರಿಪುರಾ ಉಪಜಾತಿ ಸಭಾ	4

ತ್ರಿಪುರಾವನ್ನು ಆಳಿದ ರಾಜಮಹಾರಾಜ ಹಿಂದುಳಿದ ಆದಿವಾಸಿ ಜನಾಂಗದಿಂದಲೇ ಬಂದಿದ್ದರೂ ತನ್ನ ಜನಾಂಗವನ್ನು ಕಡೆಗಣಿಸಿದ್ದ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದೊಡನೆಯೇ ತ್ರಿಪುರಾದ ಆದಿವಾಸಿಗಳ ಭಾಷೆಯಾದ 'ಕಾಕ್‌ಬರೋಕ್' ಅನ್ನು ಶಾಲೆಗಳಲ್ಲಿಕಲಿಸಲು ಏರ್ಪಾಟು ಮಾಡಿತು.

ಸಂಗ್ರಹ : ಜಿ. ಎನ್. ಮೋಹನ್

[4ನೇಪುಟದಿಂದ]

ಒಂಭತ್ತು ವರ್ಷಗಳಲ್ಲಿ....

	1976-77	1985-86
ರಾಸಾಯನಿಕ ಗೊಬ್ಬರ ಬಳಕೆ	866 ಮಿ.ಟನ್	4800 ಮಿ.ಟನ್
ಕೃಷಿ ಉತ್ಪಾದನೆ ದರ	150%	163·/.
ತೋಟಗಾರಿಕೆ ಪ್ರದೇಶ	3500,ಹೆಕ್ಟೇರ್	17.283ಹೆಕ್ಟೇರು
ಸಹಕಾರೀ ಸಂಘಗಳು	670	1199
ಸ.ಸಂಘಗಳ ಸದಸ್ಯತ್ವ	1,15,116	2,74,000
ಆರೋಗ್ಯ ಕೇಂದ್ರಗಳು	136	285
ಆಸ್ಪತ್ರೆ ಹಾಸಿಗೆಗಳು	1275	1606
ಕುಡಿಯುವ ನೀರು ಪ.ಹಳ್ಳಿಗಳು	164	849
ವಿದ್ಯುತ್ ಪಡೆದ ಹಳ್ಳಿಗಳು	367	2085
-„-ಬುಡಕಟ್ಟು ಹಳ್ಳಿಗಳು	29	756
ವಿದ್ಯುತ್ ಬಳಕೆದಾರರು	19030	64000
ತಲಾ ವಿದ್ಯುತ್ ಬಳಕೆ	9.6ಯುನಿಟ್	35ಯುನಿಟ್
ನ್ಯಾಯ ಬೆಲೆ ಅಂಗಡಿಗಳು	692	1042
ಶಾಲೆಗಳ ಸಂಖ್ಯೆ	1965	2426
ಜ್ಯೂನಿಯರ್ ಕಾಲೇಜುಗಳು	30	100
ಶಾಲಾ ವಿದ್ಯಾರ್ಥಿಗಳ ಸಂಖ್ಯೆ	285·857	482740
ಜ್ಯೂನಿಯರ್ ಕಾಲೇಜು ವಿದ್ಯಾರ್ಥಿ	3092	16660

ಕೈಗಾರಿಕಾ ರಂಗದಲ್ಲಿ ಕಳೆದ 9ವರ್ಷಗಳಲ್ಲಿ 1287 ಸಣ್ಣ ಉದ್ದಿಮೆಗಳ ಸ್ಥಾಪನೆಯಾಯಿತು. 2146ಉದ್ದಿಮೆದಾರರಿಗೆ, 38630 ನೇಕಾರರಿಗೆ, ಖಾದಿ ಮತ್ತು ಗ್ರಾಮೋದ್ಯೋಗ ಇತರ 5817 ಕಸಬುದಾರರಿಗೆ ನೆರವು ಒದಗಿಸಲಾಯಿತು.

ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಸಮಗ್ರಯೋಜನೆಗಳ ಜಾರಿ ಮತ್ತು ಕಸಬುದಾರರಿಗೆ ತರಬೇತಿ ಈ ಕೈಗಾರಿಕಾ ನೀತಿಯ ಪ್ರಮುಖ ಅಂಶ. ಮೇಲೆ ಹೇಳಿದ ರಾಜ್ಯ ವ್ಯಾಪಿ ಸಹಕಾರಿ ಸಂಘಗಳಲ್ಲಿ ದೇಶದ ಬೇರೆಡೆ ಕಾಣುವ ಕೃಷಿ ಉತ್ಪನ್ನ ಹಾಗೂ ಹಾಲು ಉತ್ಪಾದನೆಗಳ ಸಹಕಾರಿ ಸಂಘಗಳಲ್ಲದೆ, ಟೈಲರುಗಳು ಇಟ್ಟಿಗೆ ಗೂಡು ಕಾರ್ಮಿಕರು, ರಬ್ಬರ್ ಕಾರ್ಮಿಕರು, ಟೀ ತೋಟ ಕಾರ್ಮಿಕರು, ಅಕ್ಕಿ ಗಿರಣಿ ಕಾರ್ಮಿಕರು, ರಿಕ್ಷಾ ಕೆಲಸಗಾರರು ಮುದ್ರಣ ಕೆಲಸಗಾರರು ಮುಂತಾದವರ 208 ಕೈಗಾರಿಕಾ ಸಹಕಾರಿ ಸಂಘಗಳು ಈಗ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಜತೆಗೆ 23 ಕಾರ್ಮಿಕ ಶಾಸನಗಳನ್ನು ಜಾರಿಗೆ ತಂದು ಎಲ್ಲಾ ಕಸಬುಗಳಲ್ಲಿನ ಕಾರ್ಮಿಕರ ಕೂಲಿಯನ್ನು ಪರಿಷ್ಕರಿಸಿದ್ದರಿಂದ ಒಟ್ಟು ಉತ್ಪಾದನೆಯಲ್ಲಿ ಸರ್ವತೋಮುಖ ವೃದ್ಧಿ ಸಾಧ್ಯವಾಯಿತು. (ಅಭಿವೃದ್ಧಿಯ ಕೆಲವು ಅಂಕಿ ಅಂಶಗಳಿಗೆ ಬಾಕ್ಸ್ ನೋಡಿ)

ರಾಜ್ಯದ ಸಂಪನ್ಮೂಲಗಳ ಸರಿಯಾದ ಪ್ರಯೋಜನ ಪಡೆದು ಇತರ ಅಭಿವೃದ್ಧಿ ಕಾರ್ಯಗಳಿಗೂ ನೆರವಾಗಬಲ್ಲ ಕೆಲವು ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ಸ್ಥಾಪಿಸುವಲ್ಲಿ ಕೇಂದ್ರ ಸರ್ಕಾರದ ಅಸಡ್ಡೆ ಹಾಗೂ ತಾರತಮ್ಯದ ನೀತಿ ಈಗ ದೊಡ್ಡ ಬಾಧಕವಾಗಿ ನಿಂತಿದೆ. ರಾಜ್ಯದ ವ್ಯಾಪಕ ಪ್ರಾಕೃತಿಕ ಅನಿಲ ಮೂಲಗಳನ್ನು ಪೂರ್ಣವಾಗಿ ಬಳಸಿಕೊಳ್ಳುವ ಉದ್ದಿಮೆ ಹಾಗೂ ಒಂದು ಕಾಗದದ ಕಾರ್ಖಾನೆಯ ಯೋಜನೆ ಕೇಂದ್ರ ಸರ್ಕಾರದ ಅನುಮತಿಗಾಗಿ ಹಾಗೂ ನ್ಯಾಯಬದ್ಧದ ಹಣಕಾಸು ವಿತರಣೆಗಾಗಿ ಕಾದು ನಿಂತಿವೆ.

ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲೂ ಎಡರಂಗ ಸರ್ಕಾರದ ದಾಖಲೆಗಳು ಗಮನಾರ್ಹ. ಜನತೆಯ ಸಮಗ್ರ ಶ್ರೇಯೋಭಿವೃದ್ಧಿಯಲ್ಲಿ ಶಿಕ್ಷಣದ ಪ್ರಮುಖ ಪಾತ್ರವನ್ನು ಎಡರಂಗ ಸರ್ಕಾರ ಮಾತ್ರವಲ್ಲ, ಅದಕ್ಕೆ ಮೊದಲೇ ರಾಜ್ಯದ ಎಡರಂಗ ಆಂದೋಲನ ಚೆನ್ನಾಗಿ ಅರ್ಥಮಾಡಿಕೊಂಡಿತ್ತು. 1981ರ ಜನಗಣತಿಯ ಪ್ರಕಾರ ಕಂಡು ಬಂದ ಸಾಕ್ಷರತಾ ದರಗಳ ಹೋಲಿಕೆಯನ್ನು ನೋಡಿ. ತ್ರಿಪುರಾದ ಜನಸಂಖ್ಯೆಯಲ್ಲಿ 44% ಹರಿಜನ-ಗಿರಿಜನರು ಎಂಬ ಹಿನ್ನೆಲೆಯಲ್ಲಿ ಇದನ್ನು ಗಮನಿಸಬೇಕು.

ಶಿಕ್ಷಣ ಸಾರ್ವತ್ರೀಕರಣದ ನೀತಿಯನ್ನು ತೀವ್ರವಾಗಿ ಜಾರಿಗೆ ತರುವ ಪ್ರಯತ್ನವನ್ನು, ಮುಖ್ಯವಾಗಿ ರಾಜ್ಯದ ಗುಡ್ಡಗಾಡು ಪ್ರದೇಶಗಳ ಮೂಲೆ-ಮೂಲೆಗೂ ಶಿಕ್ಷಣವನ್ನು ವಿಸ್ತರಿಸುವ ಪ್ರಯತ್ನವನ್ನು ಎಡರಂಗ ಸರ್ಕಾರ ಮುಂದುವರಿಸುತ್ತಿದೆ. 1987-88ರ ಮುಂಗಡ ಪತ್ರದಲ್ಲಿ ಅತ್ಯಂತ ಹೆಚ್ಚು ಮೊತ್ತ, ಅಂದರೆ 15.99./. ಯನ್ನು ಶಿಕ್ಷಣ ಇಲಾಖೆಗಾಗಿ ಮೀಸಲಿಡಲಾಗಿದೆ !

ಇದರ ಜತೆಗೆ ಸರ್ಕಾರದ ಉದಾರ ರಾಜಕೀಯ ನೀತಿಯಿಂದಾಗಿ 300ಕ್ಕೂ ಹೆಚ್ಚು ತೀವ್ರವಾದೀ ಬುಡಕಟ್ಟು ಯುವಕರು ತಮ್ಮ ವಿನಾಶಕಾರೀ ಮಾರ್ಗದ ನಿಷ್ಫಲತೆಯನ್ನು ಮನಗಂಡು ಶಸ್ತ್ರತ್ಯಾಗ ಮಾಡಿ ಪ್ರಜಾಪ್ರಭುತ್ವ ಬದುಕಿಗೆ ಮರಳುವಂತೆ ಮಾಡುವುದೂ ಸಾಧ್ಯವಾಯಿತು.

	ತ್ರಿಪುರ	ಅಖಿಲ-ಭಾರತ
ಗಂಡಸರು	51.7./.	46.89./.
ಹೆಂಗಸರು	31.99./.	24.82./.
ಒಟ್ಟು	41.48./.	36.23./.

ಎಸ್. ಯು. ಸಿ. ಐ.
ಎಂಬ ಏಕೈಕ "ಅಕೃತ್ರಿಮ" ಕಮ್ಯುನಿಸ್ಟ್ ಪಕ್ಷ

ಪಿ. ಆರ್. ಪರಮೇಶ್ವರನ್
ಸಂಗ್ರಹ: ಉದಯಕುಮಾರ್
"ತೀಕದಿರ್" ಪತ್ರಿಕೆಯಿಂದ

S.U. C. I. (socialist Unity Centre of India) ಎಂಬುದು ದೀರ್ಘಕಾಲದಿಂದ ಪಶ್ಚಿಮ ಬಂಗಾಳದಲ್ಲಿ ಅಸ್ತಿತ್ವದಲ್ಲಿರುವ ಒಂದು ಪಕ್ಷ. 1967ರಲ್ಲಿ ಪ.ಬಂಗಾಳದಲ್ಲಿ ರಚನೆಯಾದ ಐಕ್ಯ ಪ್ರಜಾಸತ್ತಾತ್ಮಕ ರಂಗದ ಮಂತ್ರಿಮಂಡಲದಲ್ಲಿ ಇದೂ ಒಂದೂ ಅಂಗಪಕ್ಷವಾಗಿತ್ತು. ಒಂದು ಎಡ ಪಕ್ಷ ಎಂಬ ರೀತಿಯಲ್ಲಿ ಈ ಪಕ್ಷಕ್ಕೆ ಆಗ ಜನತೆಯ ನಡುವೆ ಸ್ವಲ್ಪ ಮಟ್ಟಿಗೆ ಗೌರವವಿತ್ತು. ಕೇಂದ್ರ ಸರ್ಕಾರವು ಪ. ಬಂಗಾಳದ ಐಕ್ಯ ಪ್ರಜಾಸತ್ತಾತ್ಮಕ ರಂಗದ ಮಂತ್ರಿಮಂಡಲವನ್ನು ಉರುಳಿಸಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಕುಸಿದುಕೊಂಡು ಸಿ.ಪಿ.ಐ. (ಎಂ) ಮತ್ತಿತರ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆದುರಾಗಿ ಅರೆ ಫ್ಯಾಸಿಸ್ಟ್ ಆಕ್ರಮಣವನ್ನು ಪ್ರಾರಂಭಿಸಿದಾಗಎಸ್.ಯು.ಸಿ.ಐ. ಎಡ ಪ್ರಜಾಸತ್ತಾತ್ಮಕ ರಂಗದಿಂದ ಓಟಕಿತ್ತಿತು. ಅದುವರೆಗೆ ಕಾಂಗ್ರೆಸ್ ವಿರೋಧಿಗಳಾಗಿದ್ದವರು ಕಮ್ಯುನಿಸ್ಟ್ ವಿರೋಧಿಗಳಾಗಿ ಮಾರ್ಪಟ್ಟರು, ಇಂದಿರಾ ಕಾಂಗ್ರೆಸಿನ ಬಾಲ ಬಡುಕರಾದರು. ಆದರೆ ಜನತೆಯ ತಮಾಷೆಗೆ ತಿರಸ್ಕಾರಕ್ಕೆ ಗುರಿಯಾದರು. ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ಪಕ್ಷದ ಶಕ್ತಿ ಎರಡು ವಿಧಾನ ಸಭಾ ಕ್ಷೇತ್ರಗಳಿಗೆ ಮಾತ್ರ ಸೀಮಿತಗೊಂಡಿವೆ.

ನಿಜವಾದ ಕಮ್ಯುನಿಸ್ಟ್ ಪಕ್ಷ

ಭಾರತದ ಬೇರಾವುದೇ ರಾಜ್ಯದಲ್ಲಿ ಇವರಿಗೆ, ಸಂಘಟನೆ ಬೆಂಬಲಗಳು ಇಲ್ಲವೆಂದೇ ಹೇಳಬಹುದು. ಆದರೆ ಅಲ್ಲಲ್ಲಿ ಕೆಲವು ವ್ಯಕ್ತಿಗಳ ಮೂಲಕ ತಾವೇ ನಿಜವಾದ ಕಮ್ಯುನಿಸ್ಟ್ ಪಕ್ಷ ಎಂಬುದಾಗಿ ಹೇಳಿಕೊಳ್ಳುತ್ತಿದ್ದಾರೆ. ಗೋಡೆಗಳ ಮೇಲೆ ಉದ್ದುದ್ದ ಬರೆಯುತ್ತಿದ್ದಾರೆ. ಎಡಪಂಥೀಯ ಮುಖವಾಡವೊಳಗೆ ಇವರು ಎಡ ಚಳುವಳಿಯ ಮೇಲೆ ನಿರ್ದಿಷ್ಟವಾಗಿ ಸಿ.ಪಿ.ಐ.(ಎಂ)ನ ಮೇಲೆ ಆಪಾದನೆಗಳನ್ನು ಮಾಡುತ್ತಾ, ಸುಳ್ಳುಗಳನ್ನು ಹರಡುತ್ತಾ ಇರುವುದೇ ಇವರ ಪವಿತ್ರ ಕಾರ್ಯವಾಗಿದೆ.

ಎಡಪಂಥದ ವೇಷ ಧರಿಸಿ ಕಮ್ಯುನಿಸ್ಟ್ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಇಂತಹ ಹಲವಾರು ಗುಂಪುಗಳಿಗೆ ದೇಶದ ಒಳಗೂ ಮತ್ತು ವಿದೇಶಗಳಲ್ಲೂ ಕ್ರಿಯಾಶೀಲವಾಗಿರುವ ಕಮ್ಯುನಿಸ್ಟ್ ವಿರೋಧಿ ಸಂಸ್ಥೆಗಳಿಂದ ಸಹಾಯ ದೊರೆಯುತ್ತಿದೆ. ಎಸ್.ಯು.ಸಿ.ಐ. ಕಮ್ಯುನಿಸಂನ ಹೆಸರಿನಲ್ಲೇ ಕಮ್ಯುನಿಸ್ಟ್‌ವಿರೋಧಿ ಕೆಲಸಗಳನ್ನು ಮಾಡುತ್ತಿರುವುದರಿಂದ ಇವರಿಗೆ ಹೆಚ್ಚು ಬೆಂಬಲ ಸಿಗುತ್ತದೆ. ಇವರ ಮೂಲ ನಿಯಮವನ್ನು ಸರಿಯಾಗಿ ಗುರುತಿಸುವುದು ತುಂಬಾ ಮುಖ್ಯ. ಇಂತಹ ವಿಧ್ವಂಸರ ಶಕ್ತಿಗಳನ್ನು ಎದುರಿಸಿ ಹೋರಾಡುವುದು ಕಾರ್ಮಿಕ ವರ್ಗದ ಕ್ರಾಂತಿಕಾರೀ ಚಳುವಳಿಯ ಬೆಳವಣಿಗೆಯ ದೃಷ್ಟಿಯಿಂದ ತೀರಾ ಮುಖ್ಯವಾದುದು.

ತಿರುಚುವಿಕೆ ಮತ್ತು ಮಿಥ್ಯಾರೋಪಗಳು

ಎಸ್.ಯು.ಸಿ.ಐ.ನ ಪ್ರೀತಿ ಪಾತ್ರರಾದ ನಾಯಕರೂ ಗುರುಗಳು ಮತ್ತು ಸಂಸ್ಥಾಪಕರು ಅದರ ಪ್ರಧಾನ ಕಾರ್ಯದರ್ಶಿಯಾಗಿದ್ದ ದಿವಂಗತ ಶಿಬದಾಸ್ ಘೋಷ್ 1969ರಲ್ಲಿ ತನ್ನ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾಡಿದರೆಂದು ಹೇಳಲಾಗುವ ಭಾಷಣವನ್ನು ಆಧರಿಸಿ ಒಂದು ಪುಸ್ತಕವನ್ನು 1976ರಲ್ಲಿ ಈ ಪಕ್ಷವು ಪ್ರಕಟಿಸಿದೆ. 1982ರಲ್ಲಿ ಆ ಪುಸ್ತಕದ ಎರಡನೆಯ ಆವೃತ್ತಿಯನ್ನು ಪ್ರಕಟಿಸಲಾಗಿದೆ. ಈ ಆಂಗ್ಲ ಭಾಷೆಯ ಪುಸ್ತಕಕ್ಕೆ 'ಎಸ್.ಯು.ಸಿ.ಐ. ಮಾತ್ರವೇ ಇಂಡಿಯಾದ ಏಕೈಕ ಕಮ್ಯುನಿಸ್ಟ್ ಪಕ್ಷ-ಏಕೆ ?' ಎಂಬ ತಲೆ ಬರಹವನ್ನು ನೀಡಲಾಗಿದೆ. 104 ಪುಟಗಳ ಈ ಪುಸ್ತಕದಲ್ಲಿ ಸೈದ್ಧಾಂತಿಕ ತಿರುಚುವಿಕೆಯೂ, ಇತಿಹಾಸದ ತಿರುಚುವಿಕೆಯೂ, ಮಿಥ್ಯಾರೋಪಗಳೂ, ಸುಳ್ಳುಗಳೂ ತುಂಬಿ ತುಳುಕುತ್ತಿವೆ. ಮಾರ್ಕ್ಸ್‌ನಿಂದ ನಕ್ಸಲೈಟರವರೆಗೆ ಈ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. ಆದರೆ ಯಾವುದಕ್ಕೂ ಆಧಾರಗಳನ್ನು ನೀಡಿಲ್ಲ. ಸಿ.ಪಿ.ಐ.(ಎಂ) ನ ಸ್ಥಿತಿ, ಸಿ.ಪಿ.ಐ.ನ ಸ್ಥಿತಿ ನಕ್ಸಲೈಟರ ಸ್ಥಿತಿ ಮುಂತಾಗಿ ಬರೆಯುವಾಗ ಒಂದಕ್ಕೊಂದು ಸಂಬಂಧವಿಲ್ಲದ ರೀತಿಯಲ್ಲಿ ಅಸಂಬದ್ಧವಾಗಿ ಬರೆಯಲಾಗಿದೆ.

ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷಗಳೇ ಇಲ್ಲ ತಾನೊಂದೇ ನೈಜ ಕಮ್ಯುನಿಸ್ಟ್ ಪಕ್ಷ ಎಂದು ಬೊಬ್ಬೆಹೊಡೆಯುವ ಏಕೈಕ ಗೋಡ ಬರಹದ ಪಕ್ಷದ ಪೊಳ್ಳುವಾದದ ಒಂದು ವಿಮರ್ಶೆ.

ಅವೆಲ್ಲವುಗಳನ್ನು ಇಲ್ಲಿ ಚರ್ಚಿಸಲು ಸಾಧ್ಯವಾಗುವುದಿಲ್ಲ ಅದೇ ಒಂದು ದೊಡ್ಡ ಗ್ರಂಥವಾಗಿ ಬಿಡುತ್ತದೆ.

ಸಿ.ಪಿ.ಐ.(ಎಂ)ನ ಹುಟ್ಟಿನ ಬಗ್ಗೆ ಅದರ ಯೋಜನೆಗಳ ಬಗ್ಗೆ ಕೆಳ ಕಂಡಂತೆ ಬರೆಯಲಾಗಿದೆ.

"ಸಿ-ಪಿ.ಐ.ನ ನಿಲುಮೆಯಲ್ಲೂ, ಪರಂಪರೆಯಲ್ಲೂ ತರಬೇತಿ ಪಡೆದ ಕೆಲ ನಾಯಕರು ಮತ್ತು ಗುಂಪುಗಳು ಹಳೆಯ ಸಿ.ಪಿ.ಐ.ನ ಕಾರ್ಯತಂತ್ರದಲ್ಲಿ ಕೆಲವು ಸೂಕ್ಷ್ಮ ಬದಲಾವಣೆಗಳನ್ನು ಸಮರ್ಥವಾಗಿ ಮಾಡಿ, ಕ್ರಾಂತಿಕಾರೀ ಧೋರಣೆಯನ್ನಾಗಿ "ಕಲ್ಕತ್ತಾದಲ್ಲಿ ನಡೆದ 7ನೇ ಅಧಿವೇಶನದಲ್ಲಿ ನೆರವೇರಿಸಿದರು (ಪುಟ 30)"ಎಸ್.ಯು.ಸಿ.ಐ.ನ ಸುಳ್ಳು ಆರೋಪಕ್ಕೆ ಇದೊಂದು ಉತ್ತಮ ಉದಾಹರಣೆ.

ಭಾರತದ ಕಮ್ಯುನಿಸ್ಟ್ ಚಳವಳಿಯಲ್ಲಿ ಎಡ-ಬಲ ಪರಿಷ್ಕರಣವಾದರೂ ಮತ್ತು ಮಾರ್ಕ್ಸ್‌ವಾದಕ್ಕೂ ಧೀರ್ಘ ಕಾಲದಿಂದ ನಡೆದ ಸೈದ್ಧಾಂತಿಕ ಹೋರಾಟ ಇವರಿಗೆ ತಿಳಿದಿಲ್ಲವೆಂದು ಕಾಣುತ್ತದ. ಈ ಕಾರಣದಿಂದಾಗಿಯೇ ಸಿ.ಪಿ.ಐ.(ಎಂ) ಪ್ರತ್ಯೇಕವಾಗಿ ಕೆಲಸ ಮಾಡಲು ನಿರ್ಧರಿಸಿದಾಗ ಬಹುಸಂಖ್ಯೆಯ ಪಾರ್ಟಿ ಸದಸ್ಯರು, ಪಕ್ಷವನ್ನು ಬೆಂಬಲಿಸುವ ಜನ ಸಾಮಾನ್ಯರೂ ನಮ್ಮ ಪಕ್ಷಕ್ಕೆ ಬೆಂಬಲವಾಗಿ ನಿಂತರು.

ಅಂದು ರೂಪಿಸಲಾದ ಪಕ್ಷದ ನೀತಿ ನಿಲುಮೆಗಳು ಕಳೆದ 20 ವರ್ಷಗಳ ಕಾರ್ಯರೂಪದ ಅನುಭವದಲ್ಲಿ ಸರಿಯಾದುದೆಂದು ನಿರೂಪಿಸಲ್ಪಟ್ಟಿದೆ. ಸರ್ಕಾರ ಅನುಸರಿಸುತ್ತಿರುವ ಧೋರಣೆಗಳು, ದೇಶದ ರಾಜಕೀಯ ಆರ್ಥಿಕ ಸ್ಥಿತಿಗತಿಗಳು ನಮ್ಮ ಪಕ್ಷದ ಧೋರಣೆ ಸರಿಯಾದುದೆಂಬುದನ್ನು ಸಾಬೀತು ಪಡಿಸುತ್ತದೆ. ಭಾರತದ ಸಾಮಾಜಿಕ, ಆರ್ಥಿಕ ರಾಜಕೀಯ ಪರಿಸ್ಥಿತಿಗಳ ಬಗ್ಗೆ ನಮ್ಮ ಪಕ್ಷವು ಮುಂದಿಡುವ ನಿರ್ಣಯಗಳನ್ನು ಎಸ್.ಯು.ಸಿ.ಐ.ನವರು ಆಧಾರ ಸಹಿತವಾಗಿ ವಿಮರ್ಶಿಸಲು ಅಥವಾ ಅಲ್ಲಗಳೆಯಲು ಸಾಧ್ಯವಾಗಿಲ್ಲ. ಆದರೆ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಎಂಬುದು ವಾಸ್ತವಿಕತೆಗೆ ದೂರವಾದದ್ದು ಎಂಬುದಾಗಿ ಅವರು ಯಾವ ಕಾರಣವನ್ನು ನೀಡದೆಹೇಳಿಬಿಡುತ್ತಾರೆ.

ಅವರ ಈ ಪುಸ್ತಿಕೆಯಲ್ಲಿ ಹಾಗೂ ವಾದಗಳಲ್ಲಿ ವಿವರವಾಗಿ ತಿಳಿದುಕೊಳ್ಳದವರನ್ನು ಗೊಂದಲಗೊಳಿಸುವ ಉದ್ದೇಶದಿಂದಲೇ ಸೃಷ್ಟಿಸುವ ವಿತಂಡ ವಾದಗಳು ಅನೇಕ ಇವರು ಮಾಡುವ ಆರೋಪಗಳಿಗೂ ಚಾರಿತ್ರಿಯ ಘಟನೆಗಳಿಗೂ ಏನೇನೂ ಸಂಬಂಧವಿಲ್ಲ. ಭಾರತದ ಬಂಡವಾಳಶಾಹೀ ವರ್ಗದ ಬಗ್ಗೆಯೂ, ಕಾಂಗ್ರೆಸ್ ಪಕ್ಷದ ಬಗ್ಗೆಯೂ ಇವರು ಹೊಂದಿರುವ ಅಭಿಪ್ರಾಯಗಳು ಇವರನ್ನು ನಗೆಪಾಟಲಿಗೆ ಗುರಿ ಮಾಡಿವೆ.

ಸಿ. ಪಿ. ಐ. (ಎಂ) ನ ಕಾರ್ಯಕ್ರಮವನ್ನು ಓದಿದ ಯಾರಿಗೇ ಆದರೂ ಎಸ್ ಯು ಸಿ ಐ ನವರು ಮಾಡುವ ಆರೋಪಗಳು ಶುದ್ಧ ಸುಳ್ಳೆಂಬುದು ಗೊತ್ತಾಗುತ್ತದೆ. ಇಂತಹ ಸುಳ್ಳುಗಳನ್ನು ಹೇಳಿಕೊಂಡು ತಮ್ಮನ್ನು ಏಕೈಕ ನಿಜವಾದ ಕಮ್ಯುನಿಸ್ಟ್ ಪಕ್ಷ' ಎಂದು ತೋರಿಸಿಕೊಳ್ಳಬೇಕಾದ ಅವಸ್ಥೆ ಎಸ್.ಯು.ಸಿ.ಐ. ಗೆ ಒದಗಿದೆ.

ಎಸ್.ಯು.ಸಿ.ಐ. ನವರ ಏಕೈಕ ದಸ್ತಾವೇಜಾಗಿರುವ ಪುಸ್ತಕದಲ್ಲಿ ನಕ್ಸಲೈಟರ್ ನಿಲುಮೆಯನ್ನು ಸಿ. ಪಿ. ಐ. ನಿಲುಮೆಯೆಂತೆಯೂ, ಸಿ. ಪಿ. ಐ. ನ ನಿಲುಮೆಯನ್ನು ಸಿ. ಪಿ. ಐ. (ಎಂ)ನ

[6ನೇ ಪುಟ ನೋಡಿ]

ಎಸ್. ಐ. ವಜಾಕ್ಕೆ ಒತ್ತಾಯಿಸಿ ಬೃಹತ್ ರ್‍ಯಾಲಿ

ಉಳ್ಳಾಲ ಪೋಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಜಗನ್ನಾಥ್ ಶೆಟ್ಟಿ ಎಂಬ ಭೂಮಾಲಕರ ಪರವಾದ ಕಾರ್ಯಾಚರಣೆಯಲ್ಲಿ ತೊಡಗಿದ ಸಂದರ್ಭದಲ್ಲಿ ರೈತ ಸಂಘದ ಮುಖಂಡರು ಸಿ. ಪಿ. ಐ. (ಎಂ) ಜಿಲ್ಲಾ ಸೆಕ್ರಟಾರಿಯೇಟ್ ಸದಸ್ಯರಾದ ಕಾ|| ಜನಾರ್ಧನ ನಾಯ್ಕ ಪ್ರತಿಭಟಿಸಿ ಸಂಬಂಧ ಪಟ್ಟ ದಾಖಲೆ ಪತ್ರವನ್ನು ಎಸ್. ಐ. ಗೆ ತೋರಿಸಲು ರೈತರೊಂದಿಗೆ ತೆರಳಿದರು. ಎಸ್. ಐ. ಏನೊಂದು ವಿಚಾರಣೆ ನಡೆಸದೆ ಕಾ|| ನಾಯ್ಕ್‌ರನ್ನು ಕೇಡಿ, ರೌಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಕತ್ತಿನ ಪಟ್ಟಿ ಹಿಡಿದೆಳೆದು ಹಲ್ಲೆ ನಡೆಸಿ ಫೋಟೋ ತೆಗೆದು ಸುಳ್ಳು ಕೇಸು ದಾಖಲು ಮಾಡಿದ ಘಟನೆ ಖಂಡಿಸಲು ನಡೆದ ಪ್ರತಿಭಟನಾ ಪ್ರದರ್ಶನ ಹಾಗೂ ಬಹಿರಂಗ ಸಭೆಗೆ ಉಳ್ಳಾಲ ಪ್ರದೇಶದ ರೈತರು, ಕಾರ್ಮಿಕರು, ಹಾಗೂ ವಿದ್ಯಾರ್ಥಿ-ಯುವಜನರು ಅಪೂರ್ವ ಸಂಖ್ಯೆಯಲ್ಲಿ ನೆರೆದರು. ಪೋಲೀಸ್ ಠಾಣೆಯ ಎದುರೇ ಘೋಷಣೆಗಳನ್ನು ಕೂಗುತ್ತಾ, ಹಾದು ಹೋದ ಮೆರವಣಿಗೆಯನ್ನು ಕಂಡು ಪೋಲಿಸರು ಸ್ತಂಭಿತರಾದರು. ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಕಾ|| ಪಿ. ರಾಮಚಂದ್ರರಾವ್, ಸಿ. ಐ. ಟಿ. ಯು. ಮುಖಂಡರಾದ ಕಾ|| ಕೆ. ಮೂಸಬ್ಬ, ಯು. ಜನಾರ್ಧನನ್ಯಾಕ್, ಕಮಲಾಕ್ಷ ಬಂಗೇರ, ಎಂ. ವೆಂಕಪ್ಪ ಶೆಟ್ಟಿ, ಯು. ಪಿ. ಡಿಸೋಜ, ರಾಜೀವ್ ಮೆಂಡನ್, ರವರುಗಳು ಮಾತನಾಡಿ ಈ ಘಟನೆ ಕುರಿತು ತನಿಖೆ ನಡೆಸಿ ಸಬ್‌ಇನ್ಸ್‌ಪೆಕ್ಟರ್ ಜಗನ್ನಾಥ್ ಅಮಾನತ್‌ಗೊಳಿಸಬೇಕೆಂದು ಒತ್ತಾಯಿಸಲಾಯಿತು. ಈ ಘಟನೆಯನ್ನು ಬೀಡಿ ಯೂನಿಯನ್‌ಗಳು, ರೈತಸಂಘ ವಿದ್ಯಾರ್ಥಿ ಯುವ ಸಂಘಟನೆ, ಮೋಟಾರು ಇಂಜಿನಿಯರಿಂಗ್, ರಿಕ್ಷಾ, ಮುಂತಾದ ಯೂನಿಯನ್‌ಗಳು ಖಂಡಿಸಿವೆ. ○

ಉಳ್ಳಾಲ ಮಂಡಲ ಸಭೆ ಸಿ.ಪಿ.ಐ. (ಎಂ) ಸಭಾತ್ಯಾಗ

ಉಳ್ಳಾಲ ಮಂಡಲಪಂಚಾಯತ್‌ನ ಸಾಮಾನ್ಯ ಸಭೆಗೆ ಉತ್ಪಾದನಾ ಸಮಿತಿ ಸದಸ್ಯರಾದ ಕೋಟೆಕಾರ್ ವ್ಯವಸಾಯ ಸೇವಾ ಸಹಕಾರೀ ಸಂಘದ ಅಧ್ಯಕ್ಷರಾದ ಕಾ||ಯು.ಪಿ.ಡಿಸೋಜರಿಗೆ ಆಮಂತ್ರಣ ಕಳುಹಿಸದಿರುವುದಕ್ಕಾಗಿ ಮತ್ತು ಉತ್ಪಾದನಾ ಸಮಿತಿ, ಸೌಕರ್ಯ ಸಮಿತಿ ಹಾಗೂ ನ್ಯಾಯ ಸಮಿತಿ ರಚಿಸುವ ಕಾರ್ಯಕ್ರಮವನ್ನು ಅಜೆಂಡಾದಲ್ಲಿ ಹಾಕದೆ, ಎಲ್ಲಾ ಪಕ್ಷಗಳಿಗೂ ಸರಿಯಾದ ಪ್ರಾತಿನಿಧ್ಯ ಕೊಡದಿರುವ ಕಾರಣಕ್ಕಾಗಿ, ಸಭಾತ್ಯಾಗ ನಡೆಯಿತು. 13 ಸಿ.ಪಿ.ಐ.(ಎಂ) ಸದಸ್ಯರು, 5 ಮಂದಿ ಜನತಾ ಪಕ್ಷದ ಸದಸ್ಯರು ಮತ್ತು ಒಬ್ಬ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು. ಸೌಕರ್ಯ ಸಮಿತಿಯೇ ಎಲ್ಲಾ ಕೆಲಸಗಳ ಜವಾಬ್ದಾರಿ ವಹಿಸಿ ಇತರ ಸಮಿತಿಗಳನ್ನು ಬರೀ ನಾಮಕಾವಸ್ಥೆಯ ಸಮಿತಿಗಳನ್ನಾಗಿಸುವ ಪ್ರಯತ್ನವನ್ನು ಸಭಾತ್ಯಾಗಮಾಡುವಮೊದಲು ಸಭೆಯಲ್ಲಿ ಖಂಡಿಸಲಾಯಿತು. ●

ಡಿ. ವೈ. ಎಫ್. ಐ. ರಾಜ್ಯ ಸಮಿತಿ ತೀರ್ಮಾನಗಳು

1987 ಆಗಸ್ಟ್ 22-24 ಬೆಂಗಳೂರಿನಲ್ಲಿ ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸಭೆ ಸೇರಿದ್ದಿತು. ಈ ಸಭೆಗೆ ಅಖಿಲ ಭಾರತ ಸಹ ಕಾರ್ಯದರ್ಶಿಗಳಾದ ಕಾ|| ಎಂ. ಎ. ಬೇಬಿ ಅವರು ಮಾರ್ಗದರ್ಶನ ಮಾಡಿದರು.

ಸೆಪ್ಟೆಂಬರ್ 15ರೊಳಗೆ ಸದಸ್ಯತ್ವವನ್ನು ಮುಗಿಸುವುದು. ಕರ್ನಾಟಕ ಪ್ರಾಂತ ರೈತ ಸಂಘ (ಎ.ಐ.ಕೆ.ಎಸ್)ನ ಸೆ. 7-13ರ ಪಿಕೆಟಿಂಗ್ ಚಳುವಳಿಯನ್ನು ಯಶಸ್ವಿ ಮಾಡಲು ಕಾರ್ಯನಿರ್ವಹಿಸುವುದು.

ಸೆಪ್ಟೆಂಬರ್ 23ರ ದೆಹಲಿ ಚಲೋ ಕಾರ್ಯಕ್ರಮಕ್ಕೆ ಭಾಗವಹಿಸುವುದು. ಅಕ್ಟೋಬರ್ ತಿಂಗಳಿನಲ್ಲಿ ಎಲ್ಲಾ ಜಿಲ್ಲಾ ಸಮ್ಮೇಳನಗಳನ್ನು ಮುಗಿಸುವುದು. ನವೆಂಬರ್ 6-8 ಕೋಲಾರದಲ್ಲಿ 3ನೇ ರಾಜ್ಯ ಸಮ್ಮೇಳನದಲ್ಲಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುವುದು.

ಡಿ.19ರ ಮೆರಿನಾ ಬೀಚ್ ರ್‍ಯಾಲಿಗೆ ರಾಜ್ಯದಿಂದ ಸಹಸ್ರಾರು ಯುವ ಜನರನ್ನು ಸಂಘಟಿಸುವುದು. ರ್‍ಯಾಲಿಗೆ ಬ್ಯಾಡ್ಜ್ ಮುದ್ರಿಸಬೇಕೆಂದು ತೀರ್ಮಾನಿಸಿದೆ. ○

ಅಂಗಡಿ ನೌಕರರ ಸಂಘ

ಹೊಸಪೇಟೆಯ ಅಂಗಡಿಗಳು ಮತ್ತು ವ್ಯಾಪಾರ ಸಂಸ್ಥೆಗಳಲ್ಲಿ ದುಡಿಯುವ ನೌಕರರ ಸಂಘ ರಚಿಸಲಾಗಿದೆ. ಕೆಲ ಪಟ್ಟಭದ್ರ ಹಿತಾಸಕ್ತಿಗಳು ತಡೆಯಲು ಪ್ರಯತ್ನಿಸಿದನ್ನು ಸಂಘಟಿತ ನೌಕರರು ವಿಫಲಗೊಳಿಸಿ ಸಂಘ ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ನೌಕರ ಹಿತರಕ್ಷಣೆ, ಕಾನೂನು ಬದ್ಧ ಸೌಲಭ್ಯ ಮಾಲೀಕ - ಕಾರ್ಮಿಕರ ಮಧ್ಯೆ ಉತ್ತಮ ಬಾಂದವ್ಯ ಸಂಘದ ಉದ್ದೇಶವೆಂದು ಹೇಳಿದೆ. ಸಂಘಕ್ಕೆ ಕಾ|| ಎಸ್. ಪ್ರಸನ್ನಕುಮಾರ್ (ಅಧ್ಯಕ್ಷ) ಕಾ. ಎಸ್. ವೈ. ಗುರುಶಾಂತ್, ಯೇರಿ ರಾಮಪ್ಪ (ಉಪಾಧ್ಯಕ್ಷರು) ಕಾ|| ಪಿ. ವಿ. ಶಿವಪ್ಪ (ಪ್ರ. ಕಾರ್ಯದರ್ಶಿ) ಕಾ|| ಬಿ. ಗಂಗಪ್ಪ (ಸಹ ಕಾರ್ಯದರ್ಶಿ) ಕಾ|| ತಿಮ್ಮಪ್ಪ ಖಜಾಂಚಿಯಾಗಿ ಆಯ್ಕೆಗೊಂಡಿದ್ದಾರೆ. ●

ರಾಷ್ಟ್ರೀಯ ಐಕ್ಯತಾ ದಿನಾಚರಣೆ

ಹೊಸಪೇಟೆಯಲ್ಲಿ ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಸಂಘಟನೆಗಳು ಜಂಟಿಯಾಗಿ ಕೇಂದ್ರ ಸಮಿತಿಗಳ ಕರೆಯಂತೆ ಆಗಸ್ಟ್ 15 ರಂದು ರಾಷ್ಟ್ರೀಯ ಐಕ್ಯತಾ ದಿನಾಚರಣೆಯನ್ನು ಆಚರಿಸಿದವು. ಪ್ರಮುಖ ಬೀದಿಯಲ್ಲಿ ನಡೆದ ಮೆರವಣಿಗೆಯನ್ನು ಜನರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಸುಮಾರು 8 ವೃತ್ತಗಳಲ್ಲಿ ರಾಷ್ಟ್ರೀಯ ಸಮಗ್ರತೆ - ಐಕ್ಯತೆ ಕುರಿತು ನಡೆದ ಬಹಿರಂಗ ಸಭೆಗಳಲ್ಲಿ ಕಾ||ಮಂಜುನಾಥ, ಕಾಸಿಂಅಲಿ ಎಸ್. ಅಶೋಕ್, ಜಂಬಯ್ಯ ನಾಯಕ್, ಮಂಡಲ್ ಸದಸ್ಯ ಭರ್ಮಪ್ಪ ಮತ್ತು ಪಾಡುರಂಗ ಮಾತನಾಡಿದರು. ಸಂಜೆ ನಡೆದ ಕಾರ್ಯಕರ್ತರ ಸಭೆಯಲ್ಲಿ ಕಾ| ಪಿ. ಆರ್. ವೆಂಕಟೇಶ್, ಕಾ|| ವೀರಸಂಗಯ್ಯನವರು ದೇಶದ ಇಂದಿನ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಐಕ್ಯತೆ ಕಾಪಾಡುವಲ್ಲಿ ವಿದ್ಯಾರ್ಥಿ - ಯುವ ಜನರ ಪಾತ್ರ ಕುರಿತು ಮಾತನಾಡಿದರು. ○

ಹಿರೋಷಿಮಾ ದಿನಾಚರಣೆ

ಕುಪ್ಪೆ ಪದವು ವಲಯ ಸಮಿತಿ, ನೆಲ್ಲ ತೀರ್ಥ ಡಿ. ವೈ. ಎಫ್. ಐ. ಘಟಕಗಳು ಆಗಸ್ಟ್ 6 ರಂದು ಕುಪ್ಪೆ ಪದವುನಲ್ಲಿ ಹಿರೋಷಿಮಾ ದಿನಾಚರಣೆಯನ್ನು ಆಚರಿಸಿತು. ಸಭೆಯನ್ನುದ್ದೇಶಿಸಿ ಕಾ|| ಸುನೀಲ್ ನಟೇಕರ್ ಮಾತನಾಡಿ ಹಿರೋಷಿಮಾ ದಿನಾಚರಣೆಯ ಮಹತ್ವ ಮತ್ತು ವಿಶ್ವಶಾಂತಿಗಾಗಿ ಯುವಜನರು ಹೋರಾಡಬೇಕೆಂದು ಕರೆ ನೀಡಿದರು. ಕಾ| ಬಾಲಕೃಷ್ಣ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾ|| ವಸಂತ ಆಚಾರಿ ಸ್ವಾಗತಿಸಿ ಕಾ|| ಸದಾಶಿವರವರು ವಂದಿಸಿದ್ದರು. ●

ಸಾಲಕ್ಕಾಗಿ ಕಾಲ್ನಡೆ ಜಾಥ; ಧರಣಿ ಸತ್ಯಾಗ್ರಹ

ಸವದತ್ತಿ ತಾಲ್ಲೂಕಿನ ಹೂಲಿಕಟ್ಟಿ ಗ್ರಾಮದ 200 ಮಂದಿ ಸಾಲ ಫಲಾನುಭವಿ ರೈತರು ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಆಗಸ್ಟ್ 18 ರಂದು ಕಾಲ್ನಡಿಗೆ ಜಾಥ ನಡೆಸಿ ಬ್ಯಾಂಕ್ ಮುಂದೆ ಧರಣಿ ಸತ್ಯಾಗ್ರಹ ಹೂಡಿದರು.

ಬ್ಯಾಂಕ್ ಮ್ಯಾನೇಜರ್‌ಗೆ ಮನವಿಯನ್ನು ಅರ್ಪಿಸಿ ಆಗಸ್ಟ್ 31ರ ಒಳಗೆ ಫಲಾನು ಭವಿಗಳಿಗೆ ಸಾಲ ವಿತ್ತರಣೆಯಾಗದಿದ್ದರೆ ಸರದಿ ಅನ್ನ ಸತ್ಯಾಗ್ರಹ ಹೂಡುವುದಾಗಿ ಸಭೆಯನ್ನುದ್ದೇಶಿಸಿ ಮಾತನಾಡಿದ ರೈತ ಮುಖಂಡರುಗಳಾದ ಕಾ|| ಜಿ. ಬಿ. ತೊರಗಲ್, ಎಸ್. ಬಿ. ಶಿಗ್ಗಿ ಮಾತನಾಡಿದರು. ○

500 ಕೆಲಸಗಾರರ ವಜಾ

ಯಾವ ಕಾರಣವನ್ನು ಕೊಡದೆ 500 ಕಾರ್ಮಿಕರ ವಜಾ ಚಿಕ್ಕಬಳ್ಳಾಪುರ ತಾಲ್ಲೋಕಿನಬಂಧಮ್ಮನ ಹಳ್ಳಿಯಲ್ಲಿರುವ ಸ್ಪನ್‌ರೇಶ್ಮೆ ಕಾರ್ಖಾನೆಯ ಮಾಲಕರ "ತೊಗಲಖ್" ಆಡಳಿತೆಯ ಪರಾಕ್ರಮ. ಅಂಥ ಅನ್ಯಾಯವನ್ನು ಪ್ರತಿಭಟಿಸಲು ಆಗಸ್ಟ್ 26 ರಂದು 300ಕ್ಕೂ ಹೆಚ್ಚು ಕಾರ್ಮಿಕರು ಕೈಯಲ್ಲಿ ಕೆಂಬಾವುಟ ಹಿಡಿದು ಘೋಷಣೆ ಕೂಗುತ್ತಾ ಮಂಚೇನ ಹಳ್ಳಿಯಿಂದ ಮೆರವಣಿಗೆಯಲ್ಲಿ ಬಂದು ಕಾರ್ಖಾನೆ ಹತ್ತಿರವಿರುವ ಪೋಶೆಟ್ಟಿಹಳ್ಳಿಯಲ್ಲಿ ಮತ ಪ್ರದರ್ಶನ ಮೆರವಣಿಗೆ ನಡೆಸಿದರು. ಸಿ.ಐ.ಟಿ.ಯು. ಮುಖಂಡರಾದ ಎನ್.ಕೆ ಉಪಾಧ್ಯಾಯರು, ಸಭೆಯನ್ನ ಉದ್ದೇಶಿಸಿ ಮಾತನಾಡುತ್ತಾ ಕಾರ್ಮಿಕರ ಮೇಲಿನ ದಬ್ಬಾಳಿಕೆ ಖಂಡಿಸಿದರು. ಕಾರ್ಮಿಕರುಸಂಘಟಿತರಾಗಿಹೋರಾಡುವುದು ಮಾತ್ರವಲ್ಲ ಸೆಪ್ಟೆಂಬರ್ 7ರಿಂದ 13ರ ವರೆಗೆ ನಡೆಯುವ ರೈತ ಸಂಘದ ಚಳುವಳಿಯಲ್ಲಿ ಎಲ್ಲರೂ ಪಾಲ್ಗೊಂಡು ಅದನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು. ಸತ್ಯನಾರಾಯಣ ಮತ್ತು ಜಯರಾಂರೆಡ್ಡಿಯವರೂ ಮಾತಾಡಿದರು. ●

ಅಕೃತ್ರಿಮ ಕಮ್ಯೂನಿಸ್ಟ್ ಪಕ್ಷ

(5ನೇ ಪುಟದಿಂದ)

ನಿಲುಮೆಯೆಂತೆಯೂ, ಸಿ. ಪಿ. ಐ. [ಎಂ] ನ ನಿಲುಮೆಯನ್ನು ಸಿ. ಪಿ. ಐ. ನ ನಿಲುಮೆಯೆಂತೆಯೂ ಪ್ರತಿಪಾದಿಸಿ ಕಲಸು ಮೇಲೋಗರ ಮಾಡಲಾಗಿದೆ.

ವಿಧ್ವಂಸಕ ಶಕ್ತಿಗಳು

ಹಲವಾರು ರೀತಿಯ ಪರೀಕ್ಷೆಗಳನ್ನು ಎದುರಿಸಿ ಭಾರತದಲ್ಲಿ ಕಾರ್ಮಿಕ ವರ್ಗದ ಕ್ರಾಂತಿ ಚಳವಳಿ ಸಿ. ಪಿ. ಐ. (ಎಂ) ನ ನೇತೃತ್ವದಲ್ಲಿ ಬೆಳೆದು ಬರುತ್ತಿರುವುದು ದೇಶದ ಒಳಗಿನ ಮತ್ತು ಹೊರಗಿನ ಪ್ರತಿಗಾಮಿ ಶಕ್ತಿಗಳಿಗೆ - ಸಾಮ್ರಾಜ್ಯಶಾಹಿಗಳಿಗೆ ತುಂಬಾ ಚಿಂತೆಯನ್ನುಂಟು ಮಾಡಿದೆ. ಅವರುಗಳಿಗೆ ಇದನ್ನು ಸಹಿಸಲಾಗುತ್ತಿಲ್ಲ. ಆದುದರಿಂದ ಅವರು ಹಲವಾರು ದಿಕ್ಕುಗಳಿಂದ ಆಕ್ರಮಣಗಳನ್ನು ನಡೆಸುತ್ತಿದ್ದಾರೆ. ಶಕ್ತಿಶಾಲೀ ಬಂಡವಾಳಶಾಹೀ ಪತ್ರಿಕೆಗಳನ್ನು ಇದಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಜಾತೀಯ, ಮತೀಯ, ಜನಾಂಗೀಯ ಸಂಘ ಸಂಸ್ಥೆಗಳನ್ನು ಛಿದ್ರಕಾರೀ ಶಕ್ತಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

ಇಷ್ಟೇ ಅಲ್ಲದೆ ಎಡಪಂಥೀಯವೆಂದು ಹೇಳಿಕೊಳ್ಳುವ ಶಕ್ತಿಗಳ ಮೂಲಕವೂ ಧಾಳಿ ನಡೆಸುತ್ತಿದ್ದಾರೆ. ನಕ್ಸಲ್‌ವಾದಿಗಳು, ಟ್ರಾಟ್ಸ್ಕಿವಾದಿಗಳು ಮತ್ತಿತರ ಅಧಃಪತನ ಹೊಂದಿರುವ ಕೆಲವು ಗುಂಪುಗಳನ್ನೂ ಬೆಳೆದು ಬರುತ್ತಿರುವ ಕ್ರಾಂತಿ ಚಳವಳಿಯನ್ನು ಭಗ್ನಗೊಳಿಸಲು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇವರುಗಳಷ್ಟೇ ಅಲ್ಲದೆ ಸಿ. ಪಿ. ಐ. [ಎಂ]ನಿಂದ ಹೊರ ಹಾಕಲ್ಪಟ್ಟ ಕೆಲವು ವ್ಯಕ್ತಿಗಳು ತಾವೇ ಒಂದು ಪಕ್ಷವೆಂದು ಹೇಳಿಕೊಂಡು ತಿರುಗುತ್ತಿದ್ದಾರೆ.

ಈ ರೀತಿಯ ಒಂದು ಪಕ್ಷ ಎಸ್ ಯುಸಿಐ ಈ ಪಕ್ಷದ ಸ್ಥಾಪಕ ಮುಖಂಡರೂ, ಗುರುಗಳೂ ಆದ ಶಿಬದಾಸ್ ಘೋಷ್ ಧಾರಾಳವಾಗಿ ಹೇಳಿರುವ ಸುಳ್ಳುಗಳೂ, ಆರೋಪಗಳೂ ಈ ಪಕ್ಷ ಎಷ್ಟೊಂದು ಅಧಃಪತನ ಹೊಂದಿದೆಯೆಂಬುದಕ್ಕೆ ಸಾಕ್ಷಿ.

ಎಸ್ ಯು ಸಿ ಐ ನ ಪರಮಕಾರ್ಯವೆಂದರೆ ಆಳುವ ವರ್ಗಕ್ಕೆದುರಾಗಿ ಜನತೆಯನ್ನು ಸಂಘಟಿಸುವುದಲ್ಲ. ಅದನ್ನವರು ಎಂದೂ ಮಾಡಿಲ್ಲ ಬದಲಾಗಿ ಬೆಳೆದು ಬರುತ್ತಿರುವ ಕ್ರಾಂತಿಕಾರೀ ಚಳವಳಿಗೆದುರಾಗಿ ಅದರಲ್ಲೂ ಮುಖ್ಯವಾಗಿ ಸಿ. ಪಿ. ಐ. (ಎಂ) ಗೆದುರಾಗಿ ಅಪಾದನೆಗಳನ್ನು ಮಾಡುವುದೇ ಅವರ ಏಕೈಕ ಗುರಿಯಾಗಿದೆ. ಈ ಕಾರ್ಯಕ್ಕಾಗಿ ಅವರಿಗೆ ಬೇಕಾಗಿರುವುದು ಕೆಲವು ವ್ಯಕ್ತಿಗಳು. ಸುಳ್ಳುಗಳನ್ನು ಹೇಳಿ ಗೊಂದಲಗೊಳಿಸಿ ಕೆಲವು ಜನರನ್ನು ಅವರು ಬುಟ್ಟಿಗೆ ಹಾಕಿಕೊಳ್ಳುತ್ತಾರೆ.

ಇಂತಹ ವಿಧ್ವಂಸಕ ಶಕ್ತಿಗಳನ್ನು ಗುರುತಿಸಿ ಅವುಗಳನ್ನು ಜನತೆಯಿಂದ ಸಂಪೂರ್ಣವಾಗಿ ಪ್ರತ್ಯೇಕಗೊಳಿಸುವುದು ಕ್ರಾಂತಿಕಾರೀ ಚಳವಳಿಯ ಬೆಳವಣಿಗೆಯ ಒಂದು ಪ್ರಮುಖ ಕರ್ತವ್ಯ.

[1987 ಆಗಸ್ಟ್ 20, 21 ರ 'ತೀರದಿರ್'ಸಂಚಿಕೆಯಿಂದ

ಅನುವಾದ : ಉದಯಕುಮಾರ್

ಹಿರೋಷಿಮಾ ದಿನಾಚರಣೆ

ಹಿರೋಷಿಮಾ-ನಾಗಾಸಾಕಿ ದಿನಾಚರಣೆಯ ಅಂಗವಾಗಿ ಎಸ್.ಎಫ್.ಐ. ತುಮಕೂರು ಶಾಖೆ ಕಾಳಿದಾಸ ವಿದ್ಯಾರ್ಥಿನಿಲಯದಲ್ಲಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿತ್ತು. ಯುದ್ಧ ವಿರೋಧಿ ಗೀತೆಗಳು ದುರಂತದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಿದ ಸಭೆಯಲ್ಲಿ ಕಾಳಿದಾಸ ಕಾಲೇಜ್ ಉಪನ್ಯಾಸಕ ಸಿ.ಯತಿರಾಜ್‌ರವರು ಬಾಂಬ್ ಆಕ್ರಮಣದ ಸಿನಿಮಾ ಸ್ಲೈಡ್ ನೀಡುತ್ತ ವಿವರಣೆ ನೀಡಿದರು. ಅಧ್ಯಕ್ಷ ಭಾಷಣ ಮಾಡುತ್ತಾ ಶ್ರೀಎನ್.ಮಲ್ಲಪ್ಪನವರು ತಾರಸಮರದ ವಿರುದ್ಧ ಚಲೇಜಾವ್ ಚಳುವಳಿ ಹೂಡ ಬೇಕಾಗಿದೆ ಎಂದು ಎಚ್ಚರಿಸಿ ಎಸ್. ಎಫ್. ಐ. ನ ಈ ಕಾರ್ಯಕ್ರಮವನ್ನು ಪ್ರಶಂಸಿದರು ಎಸ್.ಎಫ್.ಐ. ಸಹಸಂಚಾಲಕ ಕೆಂಪವೀರಣ್ಣ ವಂದನಾರ್ಪಣೆ ಮಾಡಿದರು ಸುಮಾರು 200 ಮಂದಿ ವಿದ್ಯಾರ್ಥಿಗಳು ಈ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ○

ಶ್ರೀಲಂಕಾ ಒಪ್ಪಂದ ಅಮೇರಿಕಾದ ಹಿತಾಸಕ್ತಿಗೆ ಮಾರಕ

- ಹೆರಿಟೇಜ್ ಕಮಿಶನ್ ವರದಿ

ಶ್ರೀಲಂಕಾದ ತಮಿಳು ಅಲ್ಪಸಂಖ್ಯಾತರ ಸಮಸ್ಯೆಗೆ ಸಂಬಂಧಿಸಿದಂತೆ ಭಾರತ-ಶ್ರೀಲಂಕಾಗಳ ನಡುವಿನ ಒಪ್ಪಂದದ ಬಗ್ಗೆ ಅಮೇರಿಕಾದ ಹೊಟ್ಟೆಕಿಚ್ಚು ಬಹಿರಂಗವಾಗಲಾರಂಭಿಸಿದೆ. ಸಿ.ಐ.ಎ. ಯ ಅಂಗ ಸಂಸ್ಥೆಯಾಗಿರುವ ಹೆರಿಟೇಜ್ ಫೌಂಡೇಶನ್ ಆಗಸ್ಟ್ 14 ರಂದು ನೀಡಿರುವ ವರದಿ ಈ ಒಪ್ಪಂದದ ಬಗ್ಗೆ ತನ್ನ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದೆಯಲ್ಲದೆ ಭಾರತ-ಶ್ರೀಲಂಕಾಗಳ ಆಂತರಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅಮೇರಿಕಾವು ಹಸ್ತಕ್ಷೇಪ ನಡೆಸುವಂತೆ ಬಹಿರಂಗ ಕರೆ ನೀಡಿದೆ.

"ಭಾರತ ಶ್ರೀಲಂಕಾ ಒಪ್ಪಂದವು ದಕ್ಷಿಣ ಏಶಿಯಾದಲ್ಲಿ ಭಾರತದ ಪ್ರಭಾವ ಹೆಚ್ಚಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದರಿಂದಾಗಿ ಅದು ಅಮೇರಿಕಾದ ಹಿತಾಸಕ್ತಿಗೆ ಅಪಾಯಕಾರಿ" ಎಂದಿರುವ ಈ ವರದಿ "ರೀಗನ್ ಸರಕಾರವು ಶ್ರೀಲಂಕಾದೊಂದಿಗೆ ತನ್ನ ಸಂಬಂಧವನ್ನು ಬಲಪಡಿಸಿಕೊಳ್ಳಲು ಮತ್ತು ಈ ಪ್ರದೇಶದಲ್ಲಿ ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಸಲುವಾಗಿ ತುರ್ತು ಕ್ರಮ ಕೈಗೊಳ್ಳಬೇಕು ಎಂದಿದೆ. ಕೆಲವೇ ದಿನಗಳ ಹಿಂದೆ ಸಿ.ಐ.ಎ. ಯ ಮಾಜಿ ನಿರ್ದೇಶಕ ದಿ. ವಿಲಿಯಂ ಕೇಸೀ ಅವರು ಭಾರತದಲ್ಲಿ ಸೂಕ್ತಕಾಲದಲ್ಲಿ ಆಂತರಿಕ ಗಲಭೆಗಳನ್ನು ಪ್ರಚೋದಿಸುವ ಹೆರಿಟೇಜ್ ಫೌಂಡೇಶನಿನ ಶಿಫಾರಸುಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ ಬರೆದ ಒಂದು ಪತ್ರ ಬೆಳಕಿಗೆ ಬಂದ ಹಿನ್ನಲೆಯಲ್ಲೇ ಹೆರಿಟೇಜ್ ಫೌಂಡೇಶನ್ನಿನ ಈ ವರದಿ ಪ್ರಕಟವಾದುದನ್ನೂ ಗಮನಿಸಬೇಕು.

"ಶ್ರೀಲಂಕಾದ ತಮಿಳರ ಸಮಸ್ಯೆಯನ್ನು ನಿಯಂತ್ರಿಸುವಲ್ಲಿ ಅಮೇರಿಕಾ ಅದಕ್ಕೆ ಬಲವಾದ ಬೆಂಬಲ ನೀಡಲು ವಿಫಲವಾದ ಕಾರಣ ಶ್ರೀಲಂಕಾ ಭಾರತದ ಒತ್ತಡಕ್ಕೆ ಮಣಿದು ತಮಿಳರಿಗೆ ಹಲವು ರಿಯಾಯಿತಿಗಳನ್ನು ಕೊಡಬೇಕಾಯಿತು. ಭಾರತದ ಒತ್ತಾಯಕ್ಕೆ ಕಟ್ಟು ಬಿದ್ದ ಶ್ರೀಲಂಕಾ ತನ್ನಲ್ಲಿದ್ದ ಅಮೇರಿಕನ್ ಮತ್ತಿತರ ವಿದೇಶೀ ಸೈನಿಕ ಸಲಹೆಗಾರರನ್ನು ಅಲ್ಲಿಂದ ಕಂಬಿ ಕೀಳಿಸಬೇಕಾಯಿತು. ತನ್ನ ನೆಲದಲ್ಲಿ ವಿದೇಶೀ ಸೈನಿಕ ನೆಲೆಗಳಿಗೆ ಅವಕಾಶ ನೀಡಲಾರೆನೆಂದೂ ಒಪ್ಪಿಕೊಳ್ಳಬೇಕಾಯಿತು. ಇದರಿಂದ ಅಮೇರಿಕಕ್ಕೆ ತುಂಬಾ ನಷ್ಟವಾಗಿದೆ"ಯೆಂದೂ ಹೆರಿಟೇಜ್ ವರದಿ ಒಳಗೊಂಡಿದೆ.

"ಹಿಂದೂ ಮಹಾಸಾಗರದಲ್ಲಿನ ಡೀಯಾಗೋ ಗಾರ್ಸಿಯಾದಂತಹ ಅಮೇರಿಕನ್ ಸೈನಿಕ ನೆಲೆಗಳ ಬಗ್ಗೆ ಭಾರತದ ಟೀಕೆಯನ್ನು ಮೆದುಗೊಳಿಸುವಲ್ಲಿ ಈವರೆಗೆ ಶ್ರೀಲಂಕಾವ ರಾಜಕೀಯ ಮುತ್ಸದ್ದಿಗಳು ಅಮೇರಿಕಕ್ಕೆ ನೆರವಾಗಲಿದ್ದರು. ಭಾರತ-ಶ್ರೀಲಂಕಾ ಒಪ್ಪಂದದಿಂದಾಗಿ ಇನ್ನು ಮುಂದೆ ಶ್ರೀಲಂಕಾದಲ್ಲಿ ಯಾರೂ ಅಮೇರಿಕದ ಪರವಾಗಿ ವಕಾಲತ್ತು ನಡೆಸಲಾರರು" ಎಂದೂ ಈ ವರದಿ ಸಂಕಟ ವ್ಯಕ್ತಪಡಿಸಿದೆ.

ಶ್ರೀಲಂಕಾದ ಆರ್ಥಿಕ ಯೋಜನೆಗಳ ಬಗ್ಗೆ ಹೆರಿಟೇಜ್ ವರದಿಯ ಪ್ರಲಾಪ ಇನ್ನೂ ಕುತೂಹಲಕಾರಿ. "ಹಲವು ವರ್ಷಗಳ ಕಾಲ ಕೆಲಸಕ್ಕೆ ಬಾರದ ಸಮಾಜವಾದಿ ಯೋಜನೆಗಳಲ್ಲಿ ಮುಳುಗಿದ್ದ ಶ್ರೀಲಂಕಾ ಇತ್ತೀಚೆಗೆ ಅವನ್ನೆಲ್ಲ ಕೈಬಿಟ್ಟು ಮುಕ್ತ ಮಾರುಕಟ್ಟೆ ಮತ್ತು ಖಾಸಗಿಕ್ಷೇತ್ರಕ್ಕೆ ಆದ್ಯತೆನೀಡುವ ಆರ್ಥಿಕ ಯೋಜನೆಗಳನ್ನು ಹಮ್ಮಿಕೊಂಡು ಇತರ ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಮಾದರಿಯಾಗಿತ್ತು(!) ಇದೀಗ ಭಾರತದ ಬಲವಂತಕ್ಕೊಳಗಾಗಿ ಇದನ್ನೆಲ್ಲ ಕೈಬಿಟ್ಟರೆ ಏನುಗತಿ ? ಎಂದಿದೆ.

ಈ ಎಲ್ಲ ಅಪಾಯಕಾರಿ ಬೆಳವಣಿಗೆಗಳಿಂದ ಪಾರಾಗಲು ಹೆರಿಟೇಜ್ ವರದಿ ಶಿಫಾರಸು ಮಾಡಿರುವ ಕ್ರಮಗಳೇನು? "ಒಂದನೆಯದಾಗಿ, ಶ್ರೀಲಂಕಾದ ಮೇಲೆ ಭಾರತದ ಪ್ರಭಾವ ಕಡಿಮೆಯಾಗುವಂತೆ ಮಾಡಲು ಶ್ರೀಲಂಕಾಕ್ಕೆ ಸಾಕಷ್ಟು ಸೈನಿಕ ನೆರವು ನೀಡಬೇಕು. ಪಾಕ್ ಜಲಸಂಧಿಯಲ್ಲಿ ಶಾಂತಿ ಕಾಪಾಡುವ ಭಾರತದ ಜವಾಬ್ದಾರಿಯನ್ನು ಶ್ರೀಲಂಕಾ ಸೈನ್ಯವೇ ವಹಿಸಿಕೊಳ್ಳಲು ಅನುಕೂಲವಾಗುವಂತೆ ಶ್ರೀಲಂಕಾಕ್ಕೆ ಹೆಲಿಕಾಪ್ಟರ್, ರಾಡಾರ್‌ಗಳು ಮತ್ತು ಕಾವಲು ದೋಣಿಗಳನ್ನು ಯಥೇಚ್ಛವಾಗಿ ಸರಬರಾಜು ಮಾಡಬೇಕು. ಶ್ರೀಲಂಕಾ ಪೋಲೀಸರಿಗೆ ಅಮೇರಿಕವೇ ತರಬೇತಿ ನೀಡಬೇಕು. ಈ ಹಿಂದೆ ಶ್ರೀಲಂಕಾದಲ್ಲಿ ಭಯೋತ್ಪಾದಕ ಮತ್ತು ವಿಧ್ವಂಸಕಾರಿ ಶಕ್ತಿಗಳನ್ನು ಹತ್ತಿಕ್ಕಲು ಅಲ್ಲಿನ ಪೋಲೀಸರಿಗೆ ಬ್ರಿಟಿಷರು ತರಬೇತಿ ನೀಡುತ್ತಿದ್ದರು. ಭಾರತ ಶ್ರೀಲಂಕಾ ಒಪ್ಪಂದದಿಂದಾಗಿ ಅಂತಹ ಅವಕಾಶಗಳು ಕಮ್ಮಿಯಾಗಿವೆ. ಇಂತಹ ಸಂದರ್ಭದಲ್ಲಿ ಭಯೋತ್ಪಾದಕ ಮತ್ತು ದಂಗೆಕೋರ ಶಕ್ತಿಗಳನ್ನು ಹತ್ತಿಕ್ಕುವ ಕಲೆಯಲ್ಲಿ ಅಮೇರಿಕವು ಶ್ರೀಲಂಕಾದ 'ಆಯ್ದ' ಪೋಲೀಸು ಸಿಬ್ಬಂದಿಗಳಿಗೆ ತರಬೇತಿ ನೀಡಲು ಮುಂದಾಗಬೇಕು" ಎಂದಿದೆ.

ದಕ್ಷಿಣ ಏಶಿಯಾದಲ್ಲಿ ತಮ್ಮ ಪಿತೂರಿಗಳಿಗೆ ಯಶಸ್ಸು ಸಿಗದಂತೆ ಮಾಡಬಲ್ಲ ಭಾರತ-ಶ್ರೀಲಂಕಾ ಒಪ್ಪಂದ ಮತ್ತು ಈ ಎರಡೂ ರಾಷ್ಟ್ರಗಳ ಸ್ನೇಹ ಸಂಬಂಧ ಸಾಮ್ರಾಜ್ಯಶಾಹಿಗಳಿಗೆ ಎಂತಹ ಸಂಕಟ ತಂದಿದೆ !

●

ಫಿಲಿಪ್ಪೀನ್ಸ್ : ವಿಫಲ ಸೈನಿಕ ದಂಗೆ

ಅಧ್ಯಕ್ಷೆ ಕೊರೀಜಾನ್ ಅಕ್ವಿನೋ ಅವರ ಸರಕಾರದ ವಿರುದ್ಧ ಆಗಸ್ಟ್ 29 ರಂದು ನಡೆದ ಸೈನಿಕ ಬಂಡಾಯವನ್ನು ಸರಕಾರಕ್ಕೆ ನಿಷ್ಠವಾಗಿರುವ ಸೈನಿಕರು ವಿಫಲಗೊಳಿಸಿದ್ದಾರೆ. ಫಿಲೀಪ್ಪೈನ್ಸ್ ಸರಕಾರದ ವಿರುದ್ಧ ಸೈನಿಕ ದಂಗೆಯಾಗುತ್ತಿರುವುದು ಈ ವರ್ಷ ಇದು ಮೂರನೇ ಬಾರಿ. ಸುಮಾರು ಎಂಟು ನೂರು ಜನ ದಂಗೆಕೋರ ಸೈನಿಕರಿಗೂ ಸರಕಾರೀ ಪಡೆಗಳಿಗೂ ನಡೆದ ಘರ್ಷಣೆಯಲ್ಲಿ 29 ಜನ ಸತ್ತಿದ್ದಾರೆಂದೂ 91 ಜನಕ್ಕೆ ಗಾಯಗಳಾಗಿವೆಯೆಂದೂ ರ್‍ಯಾಯ್ಟರ್ ವರದಿ ಮಾಡಿದೆ. ದಂಗೆ ವಿಫಲವಾದ ಮೇಲೆ ದಂಗೆಕೋರರ ಮುಂದಾಳು ಕರ್ನಲ್ ಗ್ರೆಗೆರಿಯೋ ಹೊನಸಾನ್ ಮತ್ತು ಅವನ ಬೆಂಬಲಿಗರು ದೇಶ ಬಿಟ್ಟು ಪಲಾಯನ ಮಾಡಿದ್ದಾರೆನ್ನಲಾಗಿದೆ. ಐದು ನೂರಕ್ಕೂ ಮಿಕ್ಕಿದ ದಂಗೆಕೋರರ ಸೈನಿಕ ಅಧಿಕಾರಿಗಳನ್ನು ಸೆರೆ ಹಿಡಿಯಲಾಗಿದೆ.

●

ಕೊಲ್ಲಿಪ್ರದೇಶದಲ್ಲಿ ವೆಚ್ಚ ಎಷ್ಟು ?

ಪರ್ಶಿಯನ್ ಕೊಲ್ಲಿ ಪ್ರದೇಶದಲ್ಲಿ ತನ್ನ ನಾವಿಕ ಪಡಗಳನ್ನು ನೆಲೆಗೊಳಿಸಿರುವ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಪ್ರತಿದಿನ ತಗುಲುವವೆಚ್ಚ ಎಷ್ಟು ಗೊತ್ತೆ ? ಈ ನಾವಿಕ ಪಡಗಳಿಗಾಗಿ ಅಮೇರಿಕಾದ ತೆರಿಗೆದಾರರು ದಿನನಿತ್ಯ 1.7ಮಿಲಿಯ ಡಾಲರುಗಳನ್ನು ವ್ಯಯ ಮಾಡಬೇಕಾಗುತ್ತದೆ. ಪರ್ಶಿಯನ್ ಅಖಂಡದಲ್ಲಿರುವ ಅಮೇರಿಕಾದ ವಿಮಾನವಾಹಕ ನೌಕೆ 'ಕಾನ್ಸ್ಟಲೇಶನ್' ಒಂದಕ್ಕೇ ದಿನನಿತ್ಯ 3,30,000 ಡಾಲರ್ ಖರ್ಚಾಗುತ್ತದೆ. ಅದರಲ್ಲಿನ ಎಂಟು ಯುದ್ಧ ಅಮಾನಗಳ ಇಂಧನ ಮತ್ತಿತರ ಬಾಬತ್ತಿಗಾಗಿ ಅಮೇರಿಕವು ದಿನವೊಂದಕ್ಕೆ 5,00,000 ಡಾಲರ್ ವ್ಯಯಿಸಬೇಕಾಗುತ್ತದೆ. ಈ ವಿಮಾನ ವಾಹಕ ನೌಕೆಯಲ್ಲದೆ ಇನ್ನೂ ನಾಲ್ಕು ಕ್ರೂಯಿಸರ್‌ಗಳು, ನಾಲ್ಕು ಫ್ರಿಗೇಟ್‌ಗಳು ಎರಡು ವಿನಾಶಕ ಹಾಗೂ ಮೂರು ಕಾವಲು ನೌಕೆಗಳನ್ನು ಅಮೇರಿಕಾ ಪರ್ಶಿಯನ್ ಕೊಲ್ಲಿಗೆ ತಂದಿದೆಯಂತೆ. ಇವೆಲ್ಲಕ್ಕಾಗುವ ವೆಚ್ಚವನ್ನು ಅಮೇರಿಕಾದ ತೆರಿಗೆದಾರ ತುಂಬಬೇಕು !

●

ರಷ್ಯದಲ್ಲಿ ಸಮಂತಾ ಸ್ಮಿತ್ ನೆನಪು

ಕೆಲವು ವರ್ಷಗಳ ಹಿಂದೆ ಸೋವಿಯೆತ್ ಒಕ್ಕೂಟದ ಅಂದಿನ ಅಧ್ಯಕ್ಷ ಆಂದ್ರೋಪೋವ್ ಅವರ ಆಮಂತ್ರಣದ ಮೇರೆಗೆ ರಶಿಯಾವನ್ನು ಸಂದರ್ಶಿಸಿದ ಅಮೇರಿಕಾದ ಬಾಲೆ ಸಮಂತಾ ಸ್ಮಿತ್ ಯಾರಿಗೆ ತಾನೆ ನೆನಪಿಲ್ಲ? ಸೋವಿಯತ್ ಒಕ್ಕೂಟವು ವಿಶ್ವಶಾಂತಿಗಾಗಿ ನಡೆಸುತ್ತಿರುವ ಪ್ರಯತ್ನಗಳನ್ನು ಕಣ್ಣಾರೆ ಕಂಡು ಶಾಂತಿದೂತೆಯಾಗಿ ಅಮೇರಿಕಕ್ಕೆ ಮರಳಿದ ಹದಿಮೂರು ವರ್ಷದ ಪುಟಾಣಿ ಹುಡುಗಿ 1985ರ ಆಗಸ್ಟ್ 5ರಂದು ವಿಮಾನ ಅಪಘಾತವೊಂದರಲ್ಲಿ ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿದಳು. ಸಮಂತಾ ಸ್ಮಿತಳನ್ನು ಅಮೇರಿಕಾದ ಸಾಮ್ರಾಜ್ಯಶಾಹಿಗಳು ಮರೆತಿರಬಹುದು. ಆದರೆ ಸೋವಿಯೆತ್ ಒಕ್ಕೂಟದ ಜನಮನದಲ್ಲಿ, ಆಕೆಯ ನೆನಪು ಸದಾ ಹಸಿರು. ಆಕೆಯ ಸ್ಮೃತಿಗಾಗಿ ಸೋವಿಯೆತ್ ಒಕ್ಕೂಟವು ಇತೀಚೆಗೆ ಹೊಸದೊಂದು ಪುಸ್ತಕವನ್ನು ಪ್ರಕಟಿಸಿದೆ; ಸಮಂತಾ ಬಗ್ಗೆ 'ಅಪೆರಾ' (ನೃತ್ಯನಾಟಕ)ವೊಂದನ್ನು ರಚಿಸಲಾಗುತ್ತಿದೆ. ಸಮಂತಾ ಸ್ಮಿತ್‌ಳ ಸ್ಮಾರಕವೊಂದನ್ನು ನಿರ್ಮಿಸಲಾಗುತ್ತಿದೆ.

○

ತಮಿಳುನಾಡು : ಜನವಿರೋಧಿ ನೀತಿಯ ವಿರುದ್ಧ ಕಾರ್ಮಿಕ ವರ್ಗದ ಹೋರಾಟ

ಕಾರ್ಮಿಕ ವರ್ಗದ ವಿವಿಧ ವಿಭಾಗಗಳು ತಮಿಳುನಾಡು ರಾಜ್ಯ ಸರ್ಕಾರದ ಜನ ವಿರೋಧಿ ಧೋರಣೆಗೆದುರಾಗಿ ಶಕ್ತಿಯುತ ಹೋರಾಟವನ್ನು ಮುಂದುವರಿಸುತ್ತಿವೆ.

ಜುಲೈ 22 ರಂದು ಪುದುಕೋಟ್ಟೈ ಜಿಲ್ಲೆಯಾದ್ಯಂತ ಯಶಸ್ವಿ ಬಂದ್ ನಡೆಯಿತು. ಒಂದು ವರ್ಷಕಾಲದಿಂದ ಮುಚ್ಚಲ್ಪಟ್ಟಿದ್ದ ಎರಡು ಟೆಕ್ಸ್‌ಟೈಲ್ ಮಿಲ್‌ಗಳನ್ನು ಪುನರಾರಂಭಿಸುವಂತೆ ಒತ್ತಾಯಿಸಿ ನಡೆಸಲಾದ ಬಂದ್‌ಗೆ ಸಿ.ಪಿ.ಐ.(ಎಂ) ಸಿ.ಪಿ.ಐ. ಮತ್ತು ಡಿ.ಎಂ.ಕೆ. ಪಕ್ಷಗಳು ಜಂಟಿಯಾಗಿ ಕರೆ ನೀಡಿದ್ದವು. ಬೇಡಿಕೆಯನ್ನು ಮುಂದಿಟ್ಟು ಕಾರ್ಮಿಕ ಸಂಘಗಳು ಕಾರ್ಮಿಕರೂ ಮತ್ತವರ ಕುಟುಂಬದವರೂ ರಸ್ತೆತಡೆ ಮತ್ತು ಸಾಮೂಹಿಕ ಪಿಕೆಟಿಂಗ್ ಕಾರ್ಯಕ್ರಮಗಳನ್ನು ನಡೆಸಿ ಮುಚ್ಚಿರುವ ಮಿಲ್‌ಗಳನ್ನು ತೆರೆಯಲು ಒತ್ತಾಯಿಸಿದ್ದರು. ಇಷ್ಟಾದರೂ ಸಂಬಂಧಿಸಿದ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿದ್ದಾಗ ಬಂದ್‌ಗೆ ಕರೆ ನೀಡಲಾಯಿತು. ಬಂದ್‌ಗೆ ಬೆಂಬಲ ನೀಡಿ ಶಾಲಾ ಕಾಲೇಜುಗಳ ಅಧ್ಯಾಪಕರು, ಸರ್ಕಾರೀ ನೌಕರರು ಪ್ರದರ್ಶನಗಳನ್ನು ನಡೆಸಿದರು. ಬಂದ್ ಕಾರ್ಯಕ್ರಮದಲ್ಲಿ ಒಂದು ಸಾವಿರ ಮಂದಿ ಬಂಧನಕ್ಕೊಳಗಾದರು.

ಜುಲೈ 31ರಂದು ಕೊಯಮುತ್ತೂರಿನಲ್ಲಿ ಎಲ್ಲಾ ಕಾರ್ಮಿಕ ಸಂಘಗಳ ಸಮಾವೇಶ ನಡೆದು ನಗರದ ಮುಚ್ಚಿರುವ ಟೆಕ್ಸ್‌ಟೈಲ್ ಮಿಲ್‌ಗಳನ್ನು ತೆರೆಯುವಂತೆ ಒತ್ತಾಯಿಸಲಾಯಿತು. ರಾಜ್ಯದಲ್ಲಿ ಈಗಾಗಲೇ 18ಟೆಕ್ಸ್‌ಟೈಲ್ ಮಿಲ್‌ಗಳನ್ನು ಮುಚ್ಚಲಾಗಿದೆ ಮತ್ತು ಇನ್ನು ಕೆಲವು ಮುಚ್ಚುವ ಸ್ಥಿತಿಯಲ್ಲಿವೆ.

ರಾಜ್ಯದ ಕಾರ್ಮಿಕ ಸಂಘಗಳು ಮಿಲ್‌ಗಳನ್ನು ಪುನಃ ತೆರೆಯುವಂತೆ ಒತ್ತಾಯಿಸಿ ಹೋರಾಟ ನಡೆಸುತ್ತಿವೆ. ಸರ್ಕಾರದ ಆಶ್ವಾಸನೆಗಳೆಲ್ಲಾ ಹುಸಿಯಾಗುತ್ತಿದೆ. ರಾಜ್ಯ ಕಾರ್ಮಿಕ ಸಲಹಾ ಮಂಡಳಿಯಲ್ಲೂ ಸಹ, ಈ ವಿಚಾರವನ್ನು ಎತ್ತಲಾಗಿದೆ. ಆದರೆ ಯಾವ ಪ್ರಯೋಜನವೂ ಆಗಿಲ್ಲ,

ರಾಜ್ಯದ ಕೈಮಗ್ಗಗಳ ನೇಕಾರರು ತನ್ನ ಬೇಡಿಕೆಗಳಿಗೆ ಒತ್ತಾಯಿಸಿ ರಾಜ್ಯವ್ಯಾಪೀ ಹೋರಾಟವನ್ನು ಸೆಪ್ಟೆಂಬರ್ ತಿಂಗಳಲ್ಲಿ ನಡೆಸಲು ಸಿದ್ಧರಾಗುತ್ತಿದ್ದಾರೆ. ಪ್ರಾದೇಶಿಕ ಮಟ್ಟದಲ್ಲಿ ಸಮಾವೇಶಗಳನ್ನು ಮತ್ತು ಸಿದ್ಧತಾ ಸಭೆಗಳನ್ನು ಎಲ್ಲಾ ಕೈಮಗ್ಗ ಕೇಂದ್ರಗಳಲ್ಲೂ ನಡೆಸಲಾಗುತ್ತಿದೆ. ಇದೇ ಸಮಯದಲ್ಲಿ ಕೈಮಗ್ಗ ಮಾಲಕರ ಸಂಘ ಮತ್ತು ಪವರ್‌ಲೂಂ ಮಾಲಕರ ಸಂಘಗಳು ನೂಲಿನ ಬೆಲೆಯನ್ನು ಇಳಿಸಲು ಒತ್ತಾಯಿಸಿ ಹೋರಾಟ ನಡೆಸುತ್ತಿವೆ.

ಸಿ.ಐ.ಟಿ.ಯು. ನೇತೃತ್ವದ ತಮಿಳುನಾಡು ವಿದ್ಯುಚ್ಛಕ್ತಿ ನೌಕರರು ಜುಲೈ 17 ರಿಂದ 19ರವರೆಗೆ ಆರನೆಯ ರಾಜ್ಯ ಮಟ್ಟದ ಸಮ್ಮೇಳನವನ್ನು ನಡೆಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ನೌಕರರು ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಇವರ ಹಕ್ಕುಗಳ ಮೇಲೆ ವ್ಯವಸ್ಥಿತವಾದ ಧಾಳಿ ನಡೆಯುತ್ತಿದೆ. ಧರಣಿ ಮುಷ್ಕರದಲ್ಲಿ ಭಾಗವಹಿಸಿದ್ದಕ್ಕೂ ಕೂಡ ತೀವ್ರ ಶಿಕ್ಷೆ ನೀಡಲಾಗುತ್ತಿದೆ. ನೌಕರರ ಸಂಘದ ಸ್ಮರಣ ಸಂಚಿಕೆಗಾಗಿ ಜಾಹೀರಾತು ಸಂಗ್ರಹಿಸಿದರೆಂಬ ಒಂದೇ ಕಾರಣಕ್ಕೆ 41ಮುಖಂಡರನ್ನು ಆಡಳಿತ ವರ್ಗ ವಜಾಮಾಡಿದೆ ಮತ್ತು ಕೆಲವರಿಗೆ ದೂರದ ಪ್ರದೇಶಕ್ಕೆ ವರ್ಗ ಮಾಡಲಾಗಿದೆ. ಈ ನೌಕರರ ಹೋರಾಟದ ಮುಂಚೂಣಿಯಲ್ಲಿ ಸಿ.ಐ.ಟಿ.ಯು. ಇರುವುದೇ ಆಡಳಿತ ವರ್ಗದ ಇಂಥ ವರ್ತನೆಗೆ ಕಾರಣವಾಗಿದೆ. ಈ ಹಿನ್ನಲೆಯಲ್ಲಿ ನಡೆದ ಸಮ್ಮೇಳನವು ನೌಕರರ ನ್ಯಾಯಯುತ ಬೇಡಿಕೆಗಳು ಮತ್ತು ಕಾರ್ಮಿಕ ಹಕ್ಕುಗಳಿಗಾಗಿ ಹೋರಾಟವನ್ನು ತೀವ್ರಗೊಳಿಸಲು ನಿಶ್ಚಯಿಸಿದೆ.

ತಮಿಳುನಾಡು ರಾಜ್ಯ ಸರ್ಕಾರೀ ನೌಕರರ ಸಂಘ ಇತ್ತೀಚಿಗೆ ತಮ್ಮ ಬೇಡಿಕೆಗಳಿಗೆ ಒತ್ತಾಯಿಸಿ 72 ಗಂಟೆಗಳ ಉಪವಾಸ ಮುಷ್ಕರವನ್ನು ಹೂಡಿತ್ತು.

ರಾಜ್ಯದ ಕಾಲೇಜು ಅಧ್ಯಾಪಕರು ರಾಷ್ಟ್ರವ್ಯಾಪಿ ಹೋರಾಟದ ಭಾಗವಾಗಿ ಬೀದಿಗಿಳಿದಿದ್ದಾರೆ.

ಜನರಲ್ ಇನ್ಶೂರೆನ್ಸ್ ನೌಕರರ್ ತಮ್ಮ ಪ್ರಮುಖ ಕಾರ್ಯಕರ್ತರನ್ನು ಆಡಳಿತ ವರ್ಗ ವಜಾ ಮಾಡಿರುವುದರ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಈ ನೌಕರರು ದಕ್ಷಿಣ ವಲಯದ ತಮ್ಮ ಎಲ್ಲಾ ಕಛೇರಿಗಳಲ್ಲೂ ಒಂದೂ-ಗಂಟೆ ಕಾಲ ಮುಷ್ಕರ ನಡೆಸಿದ್ದಾರೆ.

ರಾಜ್ಯಾದ್ಯಂತ ದುಡಿಯುವ ವರ್ಗದ ಎಲ್ಲ ವಿಭಾಗಗಳೂ ಹೋರಾಟದ ಹಾದಿಯಲ್ಲಿ ಮುನ್ನಡೆದಿವೆ. ಸರ್ಕಾರಕ್ಕೆ ತತ್ತರಿಸುವಂತಹ ಪೆಟ್ಟುಗಳನ್ನು ಕೊಡುತ್ತಿವೆ.

○

REG No. BGW-148 MAG (2) PRB DECR 319/-78-79

ಬಿ.ಇ.ಎಲ್. ಕಾರ್ಮಿಕ ಚುನಾವಣೆಗಳು

ಇತ್ತೀಚೆಗೆ ಬಿ. ಇ. ಎಲ್. ನ ವರ್ಕ್ಸ್ ಕಮಿಟಿ ಕ್ಯಾಂಟೀನ್ ಸಮಿತಿ ಮೊದಲಾದ ವಿವಿಧ ಸಮಿತಿಗಳಿಗೆ ನಡೆದ ಚುನಾವಣೆಗಳಲ್ಲಿ ಸಿ. ಐ. ಟಿ. ಯು. ಗೆ ಹೆಚ್ಚು ಮತಗಳು ಬಂದಿದ್ದು ನಮ್ಮ ಪ್ರಭಾವ ಹೆಚ್ಚಾಗಿರುವುದು ಸ್ಪಷ್ಟವಾಗಿ ವಿದಿತವಾಗಿದೆ. ಇಂದು ಬಿ.ಇ ಎಲ್. ಕಾರ್ಮಿಕರಲ್ಲಿ ಸಿ.ಐ.ಟಿ.ಯು. ಗೆ ಬಲವನ್ನು ವ್ಯಕ್ತಪಡಿಸಿರುವ ಕಾರ್ಮಿಕರ ಸಂಖ್ಯೆ ಶೇ 24 ರಷ್ಟು. ಒಟ್ಟು ಮತಗಳು 2432 ಲಭಿಸಿವೆ. ಇದು ಹಿಂದೆ ಇದೇ ಚುನಾವಣೆಗಳಲ್ಲಿ ಗಳಿಸಿದ ಮತಗಳಿಗಿಂತ ಸುಮಾರು 1000ದಷ್ಟು ಹೆಚ್ಚು. ಬಿ ಇ. ಎಲ್. ನ ಪ್ರಧಾನ ಕಾರ್ಮಿಕ ಸಂಘವಾಗಿರುವ ವರ್ಕರ್ಸ್ ಯೂನಿಟಿ ಫೋರಂ ಶೇ 29 ರಷ್ಟು ಮತಗಳನ್ನು ಪಡೆದಿದ್ದರೆ ಎ.ಐ. ಟಿ. ಯು. ಸಿ. ಗೆ ಸೇರಿದ ಕಾರ್ಮಿಕ ಸಂಘಕ್ಕೆ ಶೇ 25 ರಷ್ಟು ಸಿ. ಐ. ಟಿ. ಯು. ಗೆ ಶೇ 24 ರಷ್ಟು ಬಿ. ಎಂ. ಎಸ್. ಗೆ ಶೇ 21% ರಷ್ಟು ಹಿಂದಿನ ಚುನಾವಣೆಗಳಲ್ಲಿ ವರ್ಕರ್ಸ್ ಯೂನಿಟಿ ಫೋರಂ ಗಳಿಸಿದ್ದ 4400 ಮತಗಳು ಈಗ 2900 ಕ್ಕೆ ಎ.ಐ.ಟಿ.ಯು.ಸಿ. ಗಳಿಸಿದ 3200 ಮತಗಳು 2593ಕ್ಕೆ ಇಳಿದಿದೆ. ಹಿಂದೆ ಸಿ. ಐ. ಟಿ. ಯು. ಗಳಿಸಿದ್ದಕ್ಕಿಂತ 460 ಹೆಚ್ಚು ಮತಗಳನ್ನು ಗಳಿಸಿದ್ದ ಬಿ. ಎಂ. ಎಸ್. ಸಂಘವನ್ನು ಸಿ. ಐ. ಟಿ. ಯು. ಈ ಬಾರಿ ಹಿಂದೆ ಹಾಕಿದೆ. ವರ್ಕ್ಸ್ ಕಮಿಟಿಯ 8 ಸ್ಥಾನಗಳಲ್ಲಿ ಸಿ. ಐ. ಟಿ. ಯು. ಒಂದು ಸ್ಥಾನವನ್ನು ಪಡೆದಿದೆ. ಸಿ. ಐ. ಟಿ. ಯು. ಅಭ್ಯರ್ಥಿ ಕಾ। ಮುನಿರೆಡ್ಡಿ ವರ್ಕ್ಸ್ ಕಮಿಟಿಯಲ್ಲಿ ಸ್ಥಾನ ಗಳಿಸಿದ್ದಾರೆ.

ಕಾಲೇಜು ಶಿಕ್ಷಕರ ಬೇಡಿಕೆ ಈಡೇರಿಕೆ

ಅಖಿಲ ಭಾರತ ಮಟ್ಟದಲ್ಲಿ 5000 ಕಾಲೇಜುಗಳ ಮತ್ತು ವಿ. ವಿ. ಗಳ 2 ಲಕ್ಷ ಉಪನ್ಯಾಸಕರ 32 ದಿನಗಳ ದೀರ್ಘಕಾಲದ ಮುಷ್ಕರ ಯಶಸ್ವಿಯಾಗಿದೆ. ಎಂದು ಅಖಿಲ ಭಾರತ ಯೂನಿವರ್ಸಿಟಿ ಹಾಗೂ ಕಾಲೇಜು ಉಪನ್ಯಾಸಕರ ಸಂಘದ ಅಧ್ಯಕ್ಷ ಕೆ.ಕೆ. ತೇಕೆದಾತ್ ತಿಳಿಸಿದ್ದಾರೆ.

ಈ ಅಪೂರ್ವ ಯಶಸ್ಸು ಭಾರತದ ದುಡಿಯುವ ವರ್ಗಕ್ಕೆ ಸಂತಸದಾಯಕವಾದ ಪ್ರೋತ್ಸಾಹದಾಯಕವಾದ ವಿಷಯ. ಸಮಾಜದಲ್ಲಿ ಗೌರವದ ಸ್ಥಾನ ಹೊಂದಿದ, ಮಧ್ಯಮ ವರ್ಗದ ಬುದ್ಧಿ ಜೀವಿಗಳಾದ ಉಪನ್ಯಾಸಕರು, ಪ್ರಾಧ್ಯಾಪರೂ ಕೂಡ ತಮ್ಮ ಮಧ್ಯಮ ವರ್ಗೀಯ ಪೂರ್ವಾಗ್ರಹಗಳನ್ನು ತೊರೆದು ಬೀದಿ ಬೀದಿಗಳಲ್ಲಿ ಮೆರವಣಿಗೆ ಹೊರಟು ಧರಣಿ ಸತ್ಯಾಗ್ರಹ, ಬಂಧನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು, ಒಂದು ತಿಂಗಳಿಗೂ ಹೆಚ್ಚು ಕಾಲ ಅಖಿಲ ಭಾರತ ವ್ಯಾಪಿ ಮುಷ್ಕರ ನಡೆಸಿದ್ದು ನಿಜಕ್ಕೂ ಮೆಚ್ಚುವಂತಹದ್ದು.

ಆಳುವ ವರ್ಗಗಳು ಕಾರ್ಮಿಕವರ್ಗ ರೈತ ವರ್ಗಗಳ ಮೇಲೆ ಮಾತ್ರವಲ್ಲ ಎಲ್ಲಾ ದುಡಿಯುವ ಜನತೆಯ ಜೀವನದ ಹಕ್ಕು, ಅವಕಾಶಗಳ ಮೇಲೆ ಧಾಳಿ ಎಸಗುತ್ತಿದೆ ಎಂಬುದಕ್ಕೆ, ಆದುದರಿಂದ ಎಲ್ಲರೂ ಹೋರಾಟದ ಮಾರ್ಗ ಹಿಡಿಯಬೇಕಾಗಿ ಬಂದಿವೆ ಎಂಬುದಕ್ಕೆ ಮತ್ತೊಂದು ರುಜುವಾತು ದೊರಕಿದೆ. ಹೊಸ ಆರ್ಥಿಕ ನೀತಿಯ ಫಲವಾಗಿ ಆಳುವ ವರ್ಗಗಳು ಹಾಗೂ ಜನತೆಯ ನಡುವೆ ಸಂಘರ್ಷಗಳು ಹೆಚ್ಚುತ್ತಿವೆ. ಈ ಸಂಘರ್ಷಗಳ ಫಲವಾಗಿ ಅಖಿಲ ಭಾರತ ವ್ಯಾಪೀ ಹೋರಾಟಗಳೂ ಹೆಚ್ಚುತ್ತಿವೆ ಎಂಬುದು ಮಾತ್ರವಲ್ಲ. ಜನತೆಯ ಹೋರಾಟದ ಕಣಕ್ಕಿಳಿದಂತೆ ಆಳುವ ವರ್ಗ ತನ್ನ ವರ್ಗ ಧೋರಣೆಯಿಂದ ಹಿಮ್ಮೆಟ್ಟಬೇಕಾಗುತ್ತದೆ ಎಂಬುದಕ್ಕೆ ಸಾರ್ವಜನಿಕ ಉದ್ಯಮಗಳ ಕಾರ್ಮಿಕರಹೋರಾಟದ ಸಿದ್ಧತೆಗಳು ಹಾಗೂ ಕಾಲೇಜು ಉಪನ್ಯಾಸಕರ ಮುಷ್ಕರಗಳು, ಇತ್ತೀಚೆಗೆ ಅನೇಕ ರಾಜ್ಯಗಳಲ್ಲಿ ನಡೆದ ಸರ್ಕಾರಿ ನೌಕರರ ಮುಷ್ಕರಗಳು ಸಾಕ್ಷಿಯಾಗಿವೆ.

ಎಸ್.ಎಫ್.ಐ. ಖಂಡನೆ

ಶಿಕ್ಷಕರ ನ್ಯಾಯ ಬದ್ಧ ಬೇಡಿಕೆಗಳನ್ನು 1 ತಿಂಗಳ ಕಾಲಹರಣ ಮಾಡಿದ ನಂತರ ಈಡೇರಿಸಿದ ಕೇಂದ್ರ ಸರ್ಕಾರವೇ ಒಂದು ತಿಂಗಳ ಶೈಕ್ಷಣಿಕ ಕಾಲ ಹಾಳಾಗಲು ಕಾರಣವೆಂದು ಎಸ್. ಎಫ್.ಐ. ಖಂಡಿಸಿದೆ.

○

ರಾಣೇಬೆನ್ನೂರು ನೇಕಾರರ ಬೆಂಗಳೂರ್ ಜಾಥಾ

ಕಳೆದ ಕೆಲವು ತಿಂಗಳುಗಳಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಸರಿಯಾಗಿ ನೂಲನ್ನು ಒದಗಿಸದೆ ಇರುವುದರಿಂದ ಕೆಲಸ ಇಲ್ಲದಂತಾಗಿ ಕಂಗಾಲಾದ ರಾಣೇಬೆನ್ನೂರು ಮತ್ತು ತುಮ್ಮಿನಕಟ್ಟೆ ನೇಕಾರರು ಬೆಂಗಳೂರಿಗೆ ಜಾಥಾ ನಡೆಸಿ ಸರ್ಕಾರದ ಗಮನ ಸೆಳೆದರು. ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಸರ್ಕಾರದಿಂದ ಬರಬೇಕಾದ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು; ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರಿಗೆ ತಕ್ಷಣ ಸಾಕಷ್ಟು ನೂಲನ್ನು ಒದಗಿಸಬೇಕು; ನೇಕಾರರಿಗೆ ಕಟ್ಟಿಸಿ ಕೊಡಲಾದ ವಾಸದ ಮನೆಗಳ ಸಾಲದ ಕಂತುಗಳನ್ನು ವಸೂಲಿ ಮಾಡುವುದನ್ನು ತಡೆಹಿಡಿಯಬೇಕು; ಮನೆಗಳನ್ನು ಕಟ್ಟುವಾಗ ನಡೆದ ಭ್ರಷ್ಟಾಚಾರದ ಬಗ್ಗೆ ತನಿಖೆಯಾಗಬೇಕು ಮತ್ತು ರಾಣೇಬೆನ್ನೂರ್, ತುಮ್ಮಿನ ಕಟ್ಟೆ ನೇಕಾರರಿಗೂ ರೇಷ್ಮೆ ಮತ್ತು ಜಕಾಡ್ ಮಗ್ಗಗಳನ್ನು ಒದಗಿಸಬೇಕು ಎಂಬುದೇ ನೇಕಾರರಪ್ರಮುಖ ಬೇಡಿಕೆಗಳಾಗಿದ್ದವು.

ಸಿ. ಐ. ಟಿ. ಯು. ಸಂಯೋಜಿತ ರಾಣೇಬೆನ್ನೂರ್ ತಾಲ್ಲೂಕ್ ನೇಕಾರ ಕಾರ್ಮಿಕರ ಸಂಘವು ಸಂಘಟಿಸಿದ ಈ ಜಾಥಾದಲ್ಲಿ ಸುಮಾರು 500 ಜನ ನೇಕಾರರು ಭಾಗವಹಿಸಿದ್ದು ಅವರಲ್ಲಿ 200 ಕ್ಕೂ ಹೆಚ್ಚು ಮಹಿಳೆಯರಿದ್ದರು ಸಂಘದ ಅಧ್ಯಕ್ಷ ನಿತ್ಯನಂದಸ್ವಾಮಿ ಮತ್ತು ಪ್ರಧಾನ ಕಾರ್ಯದರ್ಶಿ ಎಸ್. ಎಫ್. ಕ್ಯಾದಗಿ ಜಾಥಾದ ನೇತೃತ್ವವಹಿಸಿದ್ದರು. ಕೈಮಗ್ಗ ಅಭಿವೃದ್ಧಿ ನಿಗಮದ ಚೇರ್‌ಮನ್ ಮತ್ತು ಮ್ಯಾನೆಜಿಂಗ್ ಡೈರೆಕ್ಟರ್ ಅವರೊಂದಿಗೆ ಆಗಮಿಸಿದ ಸಣ್ಣ ಕೈಗಾರಿಕೆಗಳ ಸಚಿವ ಶ್ರೀ ಜೀವಿಜಯ ಅವರು ನೇಕಾರರಿಂದ ಮನವಿಯನ್ನು ಸ್ವೀಕರಿಸಿದರು. ಕಾ. ವಿ. ಎನ್. ಹಳಕಟ್ಟೆ ಯವರು ಮನವಿಯನ್ನು ಓದಿ ಸೂಕ್ತ ವಿವರಣೆಯನ್ನು ನೀಡಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಸಕರಾದ ಕಾಮ್ರೇಡ್ ಟಿ. ಎಸ್. ಮಣಿ ಮತ್ತು ಆರ್ ವೆಂಕಟರಾಮಯ್ಯ ಈ ಸಂದರ್ಭದಲ್ಲಿ ಹಾಜರಿದ್ದು ನೇಕಾರರ ಬೇಡಿಕೆಗಳನ್ನು ಸಚಿವರಿಗೆ ಮನವರಿಕೆ ಮಾಡಿದರು.

ಸಚಿವ ಜೀವಿಜಯ ಮಾತನಾಡುತ್ತಾ ಕೈಮಗ್ಗ ನಿಗಮಕ್ಕೆ ಹಣ ಬಿಡುಗಡೆ ಮಾಡುವುದರಲ್ಲಿ ವಿಳಂಬ ಆಗಿರುವುದನ್ನು ಒಪ್ಪಿಕೊಂಡರು. ಇನ್ನು ಹದಿನೈದು ದಿನಗಳಲ್ಲಿ ನೂಲಿನ ಪೂರೈಕೆಯನ್ನು ಹೆಚ್ಚಿಸುವುದಾಗಿಯೂ ಮನೆಸಾಲ ವಸೂಲಿಯನ್ನು ತಾತ್ಕಾಲಿಕವಾಗಿ ಮುಂದೂಡಲು ಒಪ್ಪಿಗೆ ನೀಡಿದರಲ್ಲದೆ ಮನೆಗಳನ್ನು ಕಟ್ಟುವಾಗ ನಡೆದ ಭ್ರಷ್ಟಾಚಾರದ ಬಗ್ಗೆ ಈಗಾಗಲೇ ತನಿಖೆ ಆರಂಭವಾಗಿದೆ ಎಂದರು. ನಿಗಮದ ಅಧ್ಯಕ್ಷ ಮಾತನಾಡಿ ತುಮ್ಮಿನ ಕಟ್ಟೆ ರಾಣಿ ಬೆನ್ನೂರ್ ನೇಕಾರರಿಗೂ ರೇಷ್ಮೆ ಮತ್ತು ಜಕಾಡ್ ಮಗ್ಗಗಳನ್ನು ಒದಗಿಸುವುದಾಗಿಯೂ ತಿಳಿಸಿದರು.

ಅನಂತರ ನಡೆದ ನೇಕಾರರ ಸಭೆಯಲ್ಲಿ ಕೈ ಮಗ್ಗ ನಿಗಮದ ಅಡಿಯಲ್ಲಿ ಬರುವ ರಾಜ್ಯದ ಎಲ್ಲಾ ನೇಕಾರರನ್ನು ಒಂದು ಗೂಡಿಸಿ ಕೂಲಿ ಹೆಚ್ಚಳ, ಕಾಯಂ ಕೆಲಸ ಮತ್ತು ಇತರ ಸೌಲಭ್ಯಗಳಿಗಾಗಿ ಹೋರಾಟವನ್ನು ತೀವ್ರಗೊಳಿಸಲು ತೀರ್ಮಾನಿಸಲಾಯಿತು.

ಕೇಂದ್ರ ಸಮಿತಿ ನಿರ್ಣಯ

(1ನೇ ಪುಟದಿಂದ)

6.ನಿಯಂತ್ರಿತ ದರಗಳಲ್ಲಿ ಸಾಕಷ್ಟು ಮೇವಿನ ಪೂರೈಕೆ ಆಗಬೇಕು.

7.ಸಾರ್ವಜನಿಕ ವಿತರಣಾ ಕ್ರಮವನ್ನು ಬಲಪಡಿಸಿ ಅವರ ಮೂಲಕ ಅಗತ್ಯ ಸಾಮಗ್ರಿಗಳ ಸಾಕಷ್ಟು ದಾಸ್ತಾನು ಇರುವಂತೆ ಪೂರೈಕೆ ಮಾಡಬೇಕು.

8.ಹೊಸ ಬೆಳೆಗೆ ಉದಾರ ಸಾಲ ಮತ್ತು ಮುಂಗಡಗಳನ್ನು ರೈತರಿಗೆ ನೀಡಬೇಕು. ಪೀಡಿತ ಪ್ರದೇಶಗಳಲ್ಲಿ ರೈತರು ಮತ್ತು ಕೃಷಿಕಾರ್ಮಿಕರ ಸಾಲ ಮನ್ನಾ ಮಾಡಬೇಕು.

9.ಪೀಡಿತ ಪ್ರದೇಶಗಳಲ್ಲಿ ರೋಗರುಜಿನಗಳು, ಸಾಂಕ್ರಾಮಿಕ ರೋಗಗಳು ಮತ್ತು ಅಪೌಷ್ಟಿಕತೆ ಹಬ್ಬದಂತೆ ವೈದ್ಯಕೀಯ ಸಿಬ್ಬಂದಿ ಮತ್ತು ಔಷಧಿ ಸಾಮಗ್ರಿಗಳು ದೊರಕುವಂತೆ ಏರ್ಪಾಡು ಮಾಡಬೇಕು.

ಈ ರಾಷ್ಟ್ರೀಯ ದುರಂತವನ್ನು ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳ ಸಹಾಯ ತೆಗೆದುಕೊಂಡು ಯುದ್ಧ ದೋಪಾದಿಯಲ್ಲಿ ಸಂಘಟಿಸುವುದರಿಂದ ಮಾತ್ರ ಎದುರಿಸುಲು ಸಾಧ್ಯ.

ಕೇಂದ್ರ ಸಮಿತಿ ಈ ಬೇಡಿಕೆಗಳನ್ನು ಒತ್ತಾಯಿಸಲು ಐಕ್ಯ ಚಳುವಳಿ ಬೆಳೆಸಬೇಕೆಂದು ಮತ್ತು ಸಂಕಷ್ಟಕ್ಕೊಳಗಾದ ಜನರಿಗೆ ಪರಿಹಾರ ದೊರಕಿಸಲು ಪರಿಶ್ರಮ ವಹಿಸಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ಕೊಡುತ್ತದೆ.

ರೈತ ಸಮಾವೇಶ

ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಆಗಸ್ಟ್ 31ರಂದು ಪುರಸಭೆಯಲ್ಲಿ ತಾಲೋಕು ರೈತರ ಸಮಾವೇಶ ಜರುಗಿತು. ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾ॥ಎಂ.ಎನ್. ಉಗ್ರಪ್ಪನವರು ಉದ್ಘಾಟಿಸಿ ಪಿಕೆಟಿಂಗ್ ಚಳುಳಿವಯ ಕುರಿತು ಮಾತನಾಡಿದರು. ಸೆಪ್ಟೆಂಬರ್ 7 ರಿಂದ 10ರ ವರೆಗೆ ಸಾಮೂಹಿಕ ಧರಣಿ 11ರಂದು ಪಿಕೆಟಿಂಗ್ ನಡೆಸಲು ತೀರ್ಮಾನಿಸವಾಯಿತು. ಜಿಲ್ಲಾ ಸಿ.ಐ. ಟಿ.ಯು. ಮುಖಂಡ ಕಾ॥ಮೋಹನ್ ಕುಮಾರ್, ಎಸ್.ಎಫ್.ಐ.ನ ಕಾ॥ ಬಸವರಾಜ್, ಡಿ.ವೈ.ಎಫ್.ಐ.ನ ಕಾ॥ ದೇವರಾಜ್ ಬೆಂಬಲಿಸಿಮಾತನಾಡಿದರು. ಗ್ರಾಮಾಂತಾರ ಪ್ರಚಾರ ಕಾರ್ಯ ಕೈಗೊಳ್ಳಲು ಪಿಕೆಟಿಂಗ್ ಯಶಸ್ವಿಗೊಳಿಸಲು ನಿರ್ಣಯಿಸಲಾಯಿತು.

ಈ ವಾರ....

★ ಓಹ್ ! ಆ ಕಲ್ಪನೆಯೋ ಒಂದು ಅತ್ಯದ್ಭುತ ಕವನ.

—ಸು.ರಂ.ಎಕ್ಕುಂಡಿ
'ಮಾನವ ಸರಪಳಿ' ಬಗ್ಗೆ

★ ಬೆಂಗಳೂರಿನ ಬೈಬಲ್ ಸೊಸೈಟಿಯ ಹಗರಣದಲ್ಲಿ ಖಳನಾಯಕನೆಂದರೆ ವಿದೇಶದಿಂದ ಹರಿಯುತ್ತಿರುವ ಹಣ. ಮತೀಯ ಪ್ರಚಾರಕ್ಕೆ ನೀಡಲಾಗುತ್ತಿರುವ ಈ ಹಣವನ್ನು ಹಲವು ರೀತಿಯಲ್ಲಿ ಬಳಸಲಾಗುತ್ತಿದೆ. ನಿಮ್ಮ ವರದಿಯಲ್ಲಿ ತಿಳಿಸಲಾಗಿರುವಂತೆ ಬೈಬಲ್ ಸೊಸೈಟಿ ಪಡೆದಿರುವುದು ಕೇವಲ 3 ಕೋಟಿ ರೂಗಳಲ್ಲ 7,68,76,534,54ರೂ. ಗಳು. ಈ ಹಣವನ್ನು ಹೊಂದಿರುವವರು ಹೆಚ್ಚು ಅಧಿಕಾರವನ್ನು ಹೊಂದಿರುತ್ತಾರೆ. ವಿದೇಶದಿಂದ ಬರುವ ಹಣ ಲೆಕ್ಕಕ್ಕೆ ಸಿಗದಿರಲು ಅದೂ ಒಂದು ಮುಖ್ಯ ಕಾರಣ.

—ಬೆಂಜಮಿನ್ 'ವೀಕ್' ಪತ್ರಿಕೆಯಲ್ಲಿ
ಬೆಂಗಳೂರಿನ ಬೈಬಲ್ ಸೊಸೈಟಿಯ ಬಗ್ಗೆ ಬರೆಯುತ್ತಾ....

★ ಭಯೋತ್ಪಾದನೆ ಮತ್ತು ವಿಧ್ವಂಸಕ ಕೃತ್ಯಗಳನ್ನು ತಡೆಯಲು ಕಾನೂನನ್ನು ಬಲಪಡಿಸುವ ಅಗತ್ಯದ ಹೆಸರಿನಲ್ಲಿ ಕೇಂದ್ರ ಸರ್ಕಾರ, ಲೋಕ ಸಭೆಯಿಂದ ಮೊನ್ನೆ ಅಂಗೀಕಾರ ಪಡೆದ ಮಸೂದೆಯಲ್ಲಿ ಹಲವು ಅನಪೇಕ್ಷಣೀಯ ಅಂಶಗಳಿವೆ.

'ಪ್ರಜಾವಾಣಿ' ಸಂಪಾದಕೀಯ,

★ ಕಳ್ಳರ ಸಂಗ ಮಾಡಿದ್ದೇನೋ ನಿಜ
ಆದರೆ ಅವರೇ ತುಂಬಿದ ಪೇಟೆಯಲ್ಲಿ
ಏನು ಕದಿಯಲಿ ?

– ವಿ.ಪಿ. ಸಿಂಗ್‌ರವರು ಇತ್ತೀಚೆಗೆ
ಮುಂಬಯಿ ಕವಿ ಗೋಷ್ಠಿಯಲ್ಲಿ ಓದಿದ ಕವನ

★ ಆ ಒಂದು ಅತ್ಯದ್ಭುತ ಕಲ್ಪನೆ ಕ್ರಿಯೆಗಿಳಿದದ್ದನ್ನು ಕಂಡು ಸ್ತಂಭೀಭೂತ ನಾದೆ. ಎಷ್ಟೊಂದು ಜನ ಜಾಗವಿಲ್ಲದೆ ನಿರಾಶರಾದರು.

–ತಕಳಿ ಶಿವಶಂಕರ್ ಪಿಳ್ಳೈ
ಜ್ಞಾನಪೀಠ ಪ್ರಶಸ್ತಿ ವಿಜೇತ ಕಾದಂಬರಿಕಾರರು
ಮಾನವ ಸರಪಳಿ ಬಗ್ಗೆ

Printed & Published by P. Ramachandra Rao on behalf of the Communist Party of India [Marxist] Karnataka State Committee K. V. Temple Street, Sultanpet, Bangalore-560053
Editorial and Managerial Office : L-56, K. V. Temple Street, Sultanpet B-53 Phone : 75331
Editor P· Ramachandra Rao
Managing Editor : N. K. Upadhyaya